ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ | Chilume Circulated in and around 10 countries | ಸಂಚಿಕೆ ೧೨, ಮೇ ೨೦೧೪

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧
ಸಂಪಾದಕೀಯ ... ಪು. ೨
ಆರೋಗ್ಯ ... ಪು. ೩

ಚಿಲುಮೆಯ ಒಳಗೆ

ಗೊರೂರರ ತಿಳಿ ಹಾಸ್ಯ ... ಪು. ೫
ಪಂಚತಂತ್ರದ ಕಥೆಗಳು ... ಪು. ೬
ರಾಂ ರಾಮ! ಹಾಸ್ಯ ... ಪು. ೭

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೧೦
ಕಾವ್ಯ ಚಿಲುಮೆ ... ಪು. ೧೧
ಹಾಸ್ಯ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ಕರುನಾಡು-ಕಾಂಗರುನಾಡು ... ಪು. ೧೨
ಪದ ಪುಂಜ ... ಪು. ೧೩
ರಂಗೋಲಿ ... ಪು. ೧೩

ಚಿಲುಮೆಯ ಒಳಗೆ

ಸೈಕಲ್ ಪಯಣ ... ಪು. ೧೪
ವಿಜ್ಞಾನ ... ಪು. ೧೬
ಅಲ್ಲಲ್ಲಿ ಏನೇನು ... ಪು. ೧೬

ಚಿಲುಮೆಯ ಒಳಗೆ

ಪಂಚತಂತ್ರದ ಕಥೆಗಳು
ಪುಟ ೬ ರಲ್ಲಿ ...

ಪುತ್ತಿಗೆ ಶ್ರೀಗಳ ಆಸ್ಟ್ರೇಲಿಯಾ ಭೇಟಿ – ವರದಿ

ಉಡುಪಿ ಎಂದೊಡನೆ, ಆ ವಿಶಿಷ್ಟರೂಪದ ಕಡಗೋಲ ಕೃಷ್ಣನ ನೆನಪು ಹಾಗೆ ಕಣ್ಣಮುಂದೆ ಸುಳಿಯುತ್ತದೆ. ಉಡುಪಿಯ ದೇವಸ್ಥಾನದ ನಿರ್ವಹಣೆಯಲ್ಲಿ ಭಾಗಿಯಾಗಿರುವ ಅಷ್ಟಮಠಗಳ ಪೈಕಿ ಪುತ್ತಿಗೆ ಮಠವೂ ಒಂದು. ಈ ಮಠದ ಶ್ರೀಗಳಾದ ಶ್ರೀ ಸುಗುಣೇಂದ್ರ ತೀರ್ಥರು ಮಾರ್ಚ್ ಮತ್ತು ಏಪ್ರಿಲಿನಲ್ಲಿ ಆಸ್ಟ್ರೇಲಿಯಾ ಪ್ರವಾಸದ ಸಮಯದಲ್ಲಿ ಪ್ರಮುಖ ನಗರಗಳಲ್ಲಿ ಸಂಚರಿಸಿ ಭಕ್ತರನ್ನು ಭೇಟಿ ಮಾಡಿದರು. ಈ ಭೇಟಿಯ ಸಮಯದಲ್ಲಿ ಆಸ್ಟ್ರೇಲಿಯ ದೇಶದಲ್ಲೊಂದು ಶ್ರೀ ಕೃಷ್ಣ ಮಠವನ್ನು ಆಸ್ತಿಕ ಜನರ ಅನುಕೂಲಕ್ಕಾಗಿ ತೆರೆಯುವ ಯೋಜನೆಯನ್ನು ವಿವರಿಸಿದರು.

ಆಸ್ಟ್ರೇಲಿಯಾ ರಾಜಧಾನಿಯಾದ ಕ್ಯಾನ್ಬೆರಾದಲ್ಲಿ ಮಾರ್ಚ್ ೨೮ ಮತ್ತು ೨೯ ಉಪಸ್ಥಿತರಿದ್ದರು. ಭಕ್ತರೊಬ್ಬರ ಮನೆಯಲ್ಲಿ ಅವರು ನಡೆಸಿಕೊಟ್ಟ ತೊಟ್ಟಿಲಸೇವೆಯಿಂದ ನೆರೆದಿದ್ದ ಭಕ್ತರು ಭಾವಪರವಶರಾದರು. ಕ್ಯಾನ್ಬೆರಾದ ಫ್ಲೋರಿಯಲ್ಲಿರುವ ಹಿಂದೂ ದೇವಸ್ಥಾನದಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ್ದ ಭಕ್ತವೃಂದದ ಸಮ್ಮುಖದಲ್ಲಿ ಶ್ರೀ ಕೃಷ್ಣ ಪೂಜೆಯನ್ನು ನೆರವೇರಿಸಿದರು.

ಸಿಡ್ನಿಯ ಹೆಲೆನ್ಸ್ ಬರ್ಗ್ ನಲ್ಲಿರುವ ಶ್ರೀ ವೆಂಕಟೇಶ್ವರ ದೇವಮಂದಿರದ ದಿವ್ಯ ಸಾನಿಧ್ಯದಲ್ಲಿ, ಸುಲಭವಾಗಿ ಅರ್ಥವಾಗುವಂತಹ ಸಂಸ್ಕೃತದಲ್ಲಿ ಸರಾಗವಾಗಿ ಮಾತಾಡಿ ಆ ಭಾಷೆಯ ಬಗ್ಗೆ ಅಭಿಮಾನ ಮೂಡಲು ಕಾರಣರಾದರು. ಅವರ ಅನನ್ಯ ಪೂಜಾ ವಿಧಾನದಿಂದ ನೆರೆದಿದ್ದ ಜನರು ಸಂತಸಗೊಂಡರು. ಶ್ರೀಗಳ ಜೊತೆ ಬಂದಿದ್ದ ಶಿಷ್ಯವೃಂದದವರು ತಮ್ಮ ಸಿರಿ ಕಂಠದಿಂದ ದಾಸರ ಪದಗಳನ್ನು ಹಾಡಿ ಶ್ಲೋಕಗಳ ಸಂಕೀರ್ತನೆಯನ್ನು ಜನಸ್ತೋಮದ ಆಹ್ಲಾದಕ್ಕೆ ಧಾರೆಯೆರೆದರು.

ಕರ್ನಾಟಕ ಮೂಲದ ಒಂದು ದೇವಸ್ಥಾನದ ಯೋಜನೆ ಇಡೀ ಆಸ್ಟ್ರೇಲಿಯಾದಲ್ಲಿ ಇದೇ ಮೊದಲೇನೋ! ಪುತ್ತಿಗೆ ಶ್ರೀಗಳ ಯೋಜನೆ ಸಾಕಾರಗೊಂಡು ಕನ್ನಡಿಗರ ಗುಡಿ ಆದಷ್ಟು ಬೇಗ ಇಲ್ಲೂ ತೆರೆಯುವಂತಾಗಲಿ ಎಂಬ ಹಾರೈಕೆ ಚಿಲುಮೆ ಬಳಗದಿಂದ. ▪

ವರದಿ: ಬದರಿ ತ್ಯಾಮಗೊಂಡ್ಲು

ಚಿತ್ರಗಳು ಮತ್ತು ಪೂರಕ ಮಾಹಿತಿ: ರಾಜ ನಾಗರಾಜ

ಕೇಳೋಣ

ಬಂಗಾರದ ಮನುಷ್ಯ ಚಿತ್ರದ ಒಂದು ಒಳ್ಳೆಯ ಹಾಡು

ನೋಡಲು ಚಿತ್ರ ಕ್ಲಿಕ್ ಮಾಡಿ (Click picture to view)

ಮುಂದೆರಡು ತಿಂಗಳ ಪ್ರಮುಖ ದಿನಗಳು ಪುಟ ೨ ರಲ್ಲಿ ...

ಪು. ತಿ. ನ ಬಗ್ಗೆ ಸಾಕ್ಷ್ಯಚಿತ್ರ- ಆಂಗ್ಲ ಭಾಷೆಯಲ್ಲಿ

ನೋಡಲು ಚಿತ್ರ ಕ್ಲಿಕ್ ಮಾಡಿ (Click picture to view)

ನೋಡೋಣ

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಭಾರತದಲ್ಲಿ ಸಾರ್ವತ್ರಿಕ ಚುನಾವಣಾ ಸಮಯ. ಇನ್ನೂ ಫಲಿತಾಂಶ ಬಂದಿಲ್ಲವಷ್ಟೇ! ಫಲಿತಾಂಶ ಬಂದು ಸರ್ಕಾರ ರಚನೆಯ ಪ್ರಕ್ರಿಯೆ ಶುರುವಾಗುತ್ತೆ. ಪೂರ್ಣ ಬಹುಮತ ಒಂದು ಪಕ್ಷ ಪಡೆದುಕೊಂಡರೆ ಸರಿ. ಇಲ್ಲವೆಂದಾದರೆ ಹೊಂದಾಣಿಕೆಯ ತಾಲೀಮು ಶುರು. ಯಾವ ಸರ್ಕಾರ ಬರುತ್ತೆ, ಹೇಗೆ ಹೇಗೆ ಹಸ್ತಗಳು ಚಾಚುತ್ತವೆ, ಕಮಲ ವದನೆಯ ಮಂದಹಾಸವನ್ನು ಜನಸಾಮಾನ್ಯರಲ್ಲಿ ಮೂಡಿಸುವ ಸರಕಾರ ಬರುತ್ತದೆಯೇ, ಇಲ್ಲ ಪರಸ್ಪರ ಕಿತ್ತಾಟದಿಂದ, ಪ್ರಜಾತಂತ್ರವು ಕಸದಂತಾಗಿ ಪೊರಕೆಯಿಂದ ಗುಡಿಸುಹಾಕುವಂತೆ ಆಗುತ್ತದೆಯೇ! ಇವೆಲ್ಲಾ ಕುತೂಹಲ ಭಾರತದಲ್ಲಿ ನೆಲಸಿರುವ ಜನರಿಗಷ್ಟೇ ಅಲ್ಲದೆ, ಹೊರ ದೇಶದಲ್ಲಿ ನೆಲಸಿರುವ ಭಾರತ ಮೂಲದವರೆಲ್ಲರಲ್ಲೂ ಇದೆ. ಇವೆಲ್ಲಗಳ ಮಧ್ಯೆ, ಹಲವಾರು ವರ್ಷಗಳಿಂದ ತಾಯ್ನಾಡಿನಿಂದ ದೂರವಿದ್ದರೂ, ಬೆಳೆದ ಸಂಸ್ಕೃತಿಯ ಬಗ್ಗೆ ಹೆಮ್ಮೆ ಇಟ್ಟುಕೊಂಡು, ಭಾರತದ ಒಳ್ಳೆಯ ಸಂಪ್ರದಾಯಗಳು ಹೊರನಾಡಿನಲ್ಲೂ ಬೆಳಗುವಂತೆ ಮಾಡಲು ಹಲವಾರು ರೀತಿಯಿಂದ ಸಹಕರಿಸುವ ಜನರು ನಮ್ಮ ನಡುವೆ ಕಾಣಸಿಗುತ್ತಾರೆ. ಅಂತೆಯೇ, ಬೇರೆ ಬೇರೆ ದೇಶಗಳಲ್ಲಿ ನೆಲಸಿರುವ ನಮ್ಮ ಜನರಿಗೆ ಭಾಷೆ, ಕಲೆ, ಸಂಗೀತ ಇತ್ಯಾದಿಗಳ ಮೂಲಕ ತವರಿನ ಸಿರಿಯನ್ನು ಅನೇಕ ಕಲಾವಿದರು ಬಡಿಸುತ್ತಾ ಬಂದಿದ್ದಾರೆ. ಅವರಿಗೆಲ್ಲ "ಹೊರನಾಡ ಚಿಲುಮೆ" ಯ ತಂಡವು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ, ಈ ಸಂಚಿಕೆಯನ್ನು ಅವರಿಗೆ ಸಮರ್ಪಿಸುತ್ತದೆ.

ಚುನಾವಣೆಯ ಸಂದರ್ಭಕ್ಕೆ ಸರಿ ಹೊಂದುವಂತೆ ರಾಮನಾಥ್ ಅವರ "ಛೀಟಿವಿಯ ಎಲೆಕ್ಷನ್ ಬುಲೆಟಿನ್" ವರದಿ ಮನರಂಜನೆಯಷ್ಟೇ ಅಲ್ಲದೆ, ವಾಸ್ತವ ಸ್ಥತಿ ಹೇಗಿದೆ ಎಂದು ಎತ್ತಿ ತೋರಿಸುತ್ತದೆ. ಸ್ಥಳೀಯರಾದ ನಾಗೇಂದ್ರ ಅನಂತಮೂರ್ತಿಯವರ "ಕಾಂಗರೂ ನಾಡು - ಕರುನಾಡು" ಎಂಬ ವಿಶ್ಲೇಷಣಾ ಲೇಖನ ಎರಡು ದೇಶ-ಪ್ರದೇಶಗಳ ಸಾಮ್ಯತೆಯನ್ನು ತಾಳೆಹಾಕಿ ನೋಡುತ್ತದೆ. ನೀತಿಕಥೆಗಳಲ್ಲಿ ಒಂದಾದ ಪಂಚತಂತ್ರದ ಒಂದು ಕಥಾ ಪರಿಚಯವನ್ನು ಸ್ಥಳೀಯರಾದ ಕೃಷ್ಣಪ್ರಸಾದ್ ಅವರು ತಮ್ಮ "ಮಾಲು" ಅಂಕಿತದೊಂದಿಗೆ ಪ್ರಸ್ತುತ ಪಡಿಸಿದ್ದಾರೆ.

ಪ್ರಜಾತಂತ್ರದ ರಾಜ ಯಾರು? ಭಾರತದ ಭವಿಷ್ಯವೇನು ಎಂದು ಕಾಲವು ಹೇಳುತ್ತದೆ. ಅಲ್ಲಿಯ ತನಕ ಸಿಗುವ ಸಮಯದಲ್ಲಿ ನಿಮ್ಮ ಕಾಲವು ಚಿಲುಮೆಯೊಂದಿಗೆ ಕಳೆಯಿರೆಂದು ನಮ್ಮ ಬಿನ್ನಹ. ಪತ್ರಿಕೆಯನ್ನು ಓದಿ, ನಿಮ್ಮ ಅಭಿಪ್ರಾಯದ ಪ್ರೋತ್ಸಾಹವನ್ನು ಇಮೇಲ್ (horanadachilume@gmail.com) ಮೂಲಕ ಅಥವಾ ಫೇಸ್ಬುಕ್ ಗ್ರೂಪ್ (https://www.facebook.com/groups/hchilume/) ಮೂಲಕ ಕೊಡುವಿರೆಂದು ಭಾವಿಸಿದ್ದೀವಿ.

ಹೊರನಾಡ ಚಿಲುಮೆಯು ಜೂನ್ ೨೦೧೩ ರಲ್ಲಿ ಶುರುವಾಯಿತು. ಈ ಸಂಚಿಕೆಯೂ ಸೇರಿದಂತೆ ಇಲ್ಲಿಯ ತನಕ ೧೨ ಸಂಚಿಕೆಗಳನ್ನು ಪ್ರಕಟಿಸಿದ್ದೀವಿ. ಇದು ಓದುಗರ ಮತ್ತು ಬರಹಗಾರರ ಬೆಂಬಲದಿಂದ ಸಾಧ್ಯವಾಯಿತಷ್ಟೇ. ಚಿಲುಮೆಯ ನಿರಂತರ ಪ್ರಕಟಣೆಗೆ ನಿಮ್ಮ ಅಮೂಲ್ಯ ವೋಟ್ ಸದಾ ನಮ್ಮ ಮೇಲಿರಲಿ ಎಂದು ವಿಶ್ವಾಸಮತ ಕೇಳುತ್ತಿದ್ದೇವೆ ... ▪

ಮುಂದೆರಡು ತಿಂಗಳ ಪ್ರಮುಖ ದಿನಗಳು

ಮಾಹಿತಿಗೆ www.sugamakannada.com ಗೆ ಭೇಟಿ ಕೊಡಿ

ಮೇ - ಶ್ರೀ ಜಯನಾಮ ಸಂವತ್ಸರ, ಉತ್ತರಾಯಣ, ವಸಂತ/ಗ್ರೀಷ್ಮ ಋತು, ವೈಶಾಖ/ಜ್ಯೇಷ್ಠ ಮಾಸ (MAY)

01 ಗು -ಮೇ ಡೇ
02 ಶು - ಅಕ್ಷಯ ತದಿಗೆ, ಬಸವ ಜಯಂತಿ
04 ಭಾ - ಶಂಕರ ಜಯಂತಿ
10 ಶ - ಸರ್ವತ್ರ ಏಕಾದಶಿ
11 ಭಾ -ಮದರ್ಸ್ ಡೇ
13 ಮಂ - ನರಸಿಂಹ ಜಯಂತಿ
14 ಬು - ಬುದ್ಧಪೂರ್ಣಿಮೆ
17 ಶ - ಸಂಕಷ್ಟಹರ ಗಣಪತಿ ಪೂಜೆ
24 ಶ - ಸರ್ವತ್ರ ಏಕಾದಶಿ
28 ಬು - ಅಮಾವಾಸ್ಯೆ
29 ಗು - ಜ್ಯೇಷ್ಠ ಮಾಸ ಆರಂಭ

ಜೂನ್ - ಶ್ರೀ ಜಯನಾಮ ಸಂವತ್ಸರ, ಉತ್ತರಾಯಣ, ಗ್ರೀಶ್ಮ ಋತು, ಜ್ಯೇಷ್ಠ/ಆಶಾಡ ಮಾಸ

09 ಸೋ - ನಿರ್ಜಲ ಏಕಾದಶಿ
12/13 - ನರಸಿಂಹ ಜಯಂತಿ, ಹುಣ್ಣಿಮೆ
14 ಶ - ಶಬ್-ಇ-ಬಾರಾತ್
15 ಭಾ - ಫಾದರ್ಸ್ ಡೇ
16 ಸೋ - ಸಂಕಷ್ಟಹರ ಗಣಪತಿ ಪೂಜೆ
23 ಸೋ -ಯೋಗಿನಿ ಏಕಾದಶಿ
26/27 - ಮಣ್ಣೆತ್ತಿನ ಅಮಾವಾಸ್ಯೆ
28 ಶ - ಆಶಾಡ ಮಾಸ ಆರಂಭ
29 ಭಾ - ರಂಜಾನ್ ಉಪವಾಸ ಆರಂಭ

ಸೂಕ್ತ ಆಹಾರ ಸೇವನೆ ಮತ್ತು ಕ್ಯಾನ್ಸರ್

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

2013 ಅಕ್ಟೋಬರ್, ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಚಿಲುಮೆ ಸಂಚಿಕೆಗಳಲ್ಲಿ, ಉತ್ತಮ ಆಹಾರ ಸೇವನೆಯಿಂದ ಕ್ಯಾನ್ಸರ್ ತಡೆಹಿಡಿಯುವ ಬಗ್ಗೆ ಮಾಹಿತಿ ಕೊಟ್ಟಿದ್ದೆ. ದುರದೃಷ್ಟವಶಾತ್ ಕ್ಯಾನ್ಸರ್ ರೋಗಕ್ಕೀಡಾದಲ್ಲಿ, ಈ ಸಂಚಿಕೆಯಲ್ಲಿ ಚಿಕಿತ್ಸೆಗೆ ಮುನ್ನ ಮತ್ತು ಚಿಕಿತ್ಸೆ ಪಡೆಯುವಾಗ ಅನುಸರಿಸಬೇಕಾದ ಆಹಾರ ಪದ್ಧತಿಯ ಬಗ್ಗೆ ಕೆಲವು ಮಾಹಿತಿಗಳಿವೆ. ವೈಯುಕ್ತಿಕವಾದ, ವಿವರವಾದ ಮಾಹಿತಿಯನ್ನು ಆಹಾರತಜ್ಞರಿಂದ (dietician) ಪಡೆಯಿರಿ.

ನಿಮಗೆ ತಿಳಿದಂತೆ ಮಾನವನ ಹಲವಾರು ಕಾಯಿಲೆಗಳ ನಿವಾರಣೆಗೆ ಅಥವಾ ನಿಯಂತ್ರಣಕ್ಕೆ ಮುಖ್ಯ ಮಾರ್ಗಗಳು ಮೂರು.

1. ಸೂಕ್ತ ಆಹಾರ ಸೇವನೆ 2. ವ್ಯಾಯಾಮ 3. ವೈದ್ಯಕೀಯ ಚಿಕಿತ್ಸೆ

ಕ್ಯಾನ್ಸರ್ ಚಿಕಿತ್ಸೆ ಪಡೆಯುವ ಮುನ್ನ:

- ದಂತವೈದ್ಯರನ್ನು ಕಾಣುವುದು

  ಹಲ್ಲುಗಳನ್ನು ಆರೋಗ್ಯದ ಅಂಗರಕ್ಷಕ ಎಂದು ಕರೆಯುತ್ತಾರೆ. ವಿವಿದ ಆಹಾರಪದಾರ್ಥಗಳ ಸೇವನೆಗೆ ರೋಗರಹಿತ ಹಲ್ಲುಗಳು ಬೇಕು. ಕ್ಯಾನ್ಸರ್ ಗೆ ಚಿಕಿತ್ಸೆ ಪಡೆಯುವ ಮುನ್ನ ದಂತವೈದ್ಯರನ್ನು ಕಾಣುವುದು ಅಗತ್ಯ. ಏನಾದರೂ ಸಮಸ್ಯೆ (ಉದಾ: ಹುಳುಕು ಹಲ್ಲು) ಇದ್ದಲ್ಲಿ ಕೂಡಲೆ ಚಿಕಿತ್ಸೆ ಪಡೆಯಬಹುದು. ಕ್ಯಾನ್ಸರ್ ಗೆ ಚಿಕಿತ್ಸೆ (ಉದಾ: chemotherapy, radiotherapy) ಪಡೆಯಲು ಶುರುಮಾಡಿದ ಮೇಲೆ ದಂತಚಿಕಿತ್ಸೆ ಸಾಧ್ಯವಾಗಲಾರದು.

- ತೂಕ ಹೆಚ್ಚಿಸಿಕೊಳ್ಳುವುದು

  ನಿಮ್ಮ ದೇಹ ತೂಕ ಕಡಿಮೆ ಇದ್ದಲ್ಲಿ ನೀವು ತೂಕ ಹೆಚ್ಚಿಸಿಕೊಳ್ಳ ಬೇಕಾಗುತ್ತದೆ. ಆರೋಗ್ಯಕರ ತೂಕಕ್ಕಿಂತ ಸುಮಾರು 5 ಕಿಲೋಗ್ರಾಂ ಹೆಚ್ಚಾಗಿದ್ದಲ್ಲಿ ಒಳ್ಳೆಯದು. ಏಕೆಂದರೆ ಕ್ಯಾನ್ಸರ್ ಚಿಕಿತ್ಸೆಯ ಅಡ್ಡ ಪರಿಣಾಮದಿಂದಾಗಿ ತೂಕ ಕಳೆದುಕೊಳ್ಳುವ ಸಂಭವ ಹೆಚ್ಚು. ತೂಕ ಹೆಚ್ಚಿಸಿಕೊಳ್ಳುವ ಸುಲಭೋಪಾಯವೆಂದರೆ, ಹೆಚ್ಚು ಕ್ಯಾಲೊರಿ, ಪ್ರೋಟೀನ್, ವಿಟಮಿನ್ಸ್ ಮತ್ತು ಮಿನರಲ್ಸ್ ಇರುವ ಪಾನೀಯಗಳನ್ನು ಸೇವಿಸುವುದು. ಅವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಿದ್ದೇನೆ - ಫಾರ್ಮಸಿಗಳಲ್ಲಿ ದೊರಕುವ Sustagen, Ensure, Resource, ಮನೆಯಲ್ಲೇ ತಯಾರಿಸಲಾಗುವ milkshakes, smoothie, ಬಾದಾಮಿ ಖೀರು ಮುಂತಾದುವುಗಳು.

ಕ್ಯಾನ್ಸರ್ ಚಿಕಿತ್ಸೆ ಪಡೆಯುವಾಗ:

ಉತ್ತಮ ಆಹಾರ ಸೇವನೆ ಎಲ್ಲರಿಗೂ ಅವಶ್ಯಕ, ಅದರಲ್ಲೂ ಕ್ಯಾನ್ಸರ್ ನಿಂದ ಬಳಲುತ್ತಿರುವವರಿಗೆ ಬಹು ಮುಖ್ಯ. ಏಕೆಂದರೆ ಕ್ಯಾನ್ಸರ್ ಚಿಕಿತ್ಸೆ, ಕ್ಯಾನ್ಸರ್ ಭರಿತ ಜೀವಕಣಗಳನ್ನು ನಾಶಮಾಡುವುದರೊಂದಿಗೆ ಆರೋಗ್ಯವಂತ ಜೀವಕಣಗಳನ್ನೂ ಕೂಡ ನಾಶಮಾಡುತ್ತದೆ. ಚೆನ್ನಾಗಿ ಪೋಷಣೆಪಡೆದ ದೇಹ, ಕ್ಯಾನ್ಸರ್ ಚಿಕಿತ್ಸೆಯ ಅಡ್ಡ ಪರಿಣಾಮಗಳನ್ನು ಸಮರ್ಪಕವಾಗಿ ಎದುರಿಸುತ್ತದೆ. ದೇಹದ ರಕ್ಷಣಾ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಿ ಇತರ ಸೋಂಕು, ಜಾಡ್ಯಗಳು ತಗಲದಂತೆ ಕಾಪಾಡುತ್ತದೆ. ಮಾಂಸಖಂಡಗಳು ತಮ್ಮ ಶಕ್ತಿಯನ್ನು ಕಳೆದುಕೊಳ್ಳದಂತೆ, ದಿನನಿತ್ಯದ ಕೆಲಸಕಾರ್ಯಗಳಿಗೆ ಸಾಕಷ್ಟು ಶಕ್ತಿ, ಹುರುಪು ಇರುವಂತೆ ನೋಡಿಕೊಳ್ಳುತ್ತದೆ. ಕ್ಯಾನ್ಸರ್ ಚಿಕಿತ್ಸೆಯಿಂದ ಗಾಯಗೊಂಡ, ಹಾನಿಗೊಳಗಾದ ದೇಹ ಬೇಗ ಗುಣಹೊಂದುತ್ತದೆ.

ಸರಳವಾಗಿ ಹೇಳುವುದಾದರೆ ಇದು ಕ್ಯಾನ್ಸರ್ ಮೇಲೆ ಯುದ್ಧ ಸಾರಿದಂತೆ. Chemotherapy, radiotherapy ಮತ್ತು ಶಸ್ತ್ರಚಿಕಿತ್ಸೆಯನ್ನು ಆಯುಧವನ್ನಾಗಿ ಬಳಸುತ್ತಿರುವಿರಿ. ಆಯುಧಗಳನ್ನು ಪರಿಣಾಮಕಾರಿಯಾಗಿ ಬಳಸುವುದಕ್ಕೆ ಶಕ್ತಿವಂತ ದೇಹ ಬೇಕು. ಹಾಲು, ಮೊಸರು, ಹಣ್ಣು, ತರಕಾರಿ, ಧವಸ ಧಾನ್ಯ ಮುಂತಾದ ಪುಷ್ಟಿಕರವಾದ ಆಹಾರವನ್ನು ಪ್ರತಿ ದಿನವೂ ಸೇವಿಸುವುದರಿಂದ ದೇಹಕ್ಕೆ ತಕ್ಕ ಪೋಷಣೆ ಒದಗುತ್ತದೆ. ವಿವರವಾದ ಮಾಹಿತಿಗೆ 2013ರ ಡಿಸೆಂಬರ್ ತಿಂಗಳ *ಚಿಲುಮೆ* ನೋಡಿ. ಹೆಚ್ಚು ಪೋಷಕಾಂಶಗಳ ಪೂರೈಕೆಗಾಗಿ ಪ್ರತಿ ದಿನ ಒಂದು multi-vitamin ಮಾತ್ರೆಯನ್ನು ಸೇವಿಸಿ.

ಚಿಕಿತ್ಸೆಯ ಅಡ್ಡ ಪರಿಣಾಮಗಳು

ಈ ಕೆಳಗೆ ಕೊಟ್ಟಿರುವ ಎಲ್ಲಾ ಅಡ್ಡ ಪರಿಣಾಮಗಳು ಚಿಕಿತ್ಸೆ ಪಡೆಯುವ ಎಲ್ಲರಿಗೂ ಆಗಲಾರದು. ಅಡ್ಡ ಪರಿಣಾಮಗಳ ತೀವ್ರತೆ ಕೂಡ ಚಿಕಿತ್ಸೆ ಪಡೆಯುವ ವ್ಯಕ್ತಿಗಿರುವ ಇತರ ಖಾಯಿಲೆಗಳು ಮತ್ತು ವಯಸ್ಸಿನ ಮೇಲೆ ಅವಲಂಬಿಸಿರುತ್ತದೆ

1. **ತೂಕ ಇಳಿಯುವಿಕೆ**

ತೂಕ ಇಳಿಯುತ್ತಿದ್ದರೆ, ನಿಮಗೆ ಸೇರಿದಷ್ಟು ಆಹಾರ ಸೇವಿಸಿ. ಪ್ರತಿದಿನ 200 - 500 ಮಿಲಿ ಲೀಟರ್ ನಷ್ಟುಮೇಲೆ ಹೇಳಿದ ಪ್ರೋಟೀನ್ ಮತ್ತು ಕ್ಯಾಲೊರಿಯುಕ್ತ ಪಾನೀಯಗಳನ್ನು ಕುಡಿಯಿರಿ.

2. ಹಸಿವಿಲ್ಲದಿರುವಿಕೆ

ನೀವು ಇತರ ಖಾಯಿಲೆಗಳಿಂದ ಬಳಲುತ್ತಿದ್ದರೆ (ಉದಾ: ಡಯಾಬಿಟಿಸ್) ನಿಮ್ಮ dietician ಹೇಳಿದಂತೆ ಆಹಾರ ಸೇವಿಸಿ. ಬೇರಾವ ಖಾಯಿಲೆಗಳು ಇಲ್ಲದಿದ್ದಲ್ಲಿ, ನೀವು ನಿಯಮಿತ, ಉತ್ತಮ ಆಹಾರ ಸೇವನೆಗೆ ಬದ್ದರಾಗಬೇಕಿಲ್ಲ. ಇಷ್ಟವಾದ ಆಹಾರವನ್ನು ತಿನ್ನಬಹುದು. ಎಣ್ಣೆ, ತುಪ್ಪದಲ್ಲಿ ಕರಿದ ಕುರುಕು ತಿಂಡಿಗಳು ಮತ್ತು ಸಿಹಿ ತಿಂಡಿಗಳು, ಯಾವುದು ಬೇಕೆನಿಸುತ್ತದೋ ಅದನ್ನು ತಿನ್ನಿ. **ಕೊಬ್ಬುಸಹಿತ** ಹಾಲು, ಮೊಸರು, ಚೀಜ್ ಗಳನ್ನು ಉಪಯೋಗಿಸಿ. ವಿಧವಿಧವಾದ ಆಹಾರವನ್ನು, ಕುರುಕು ತಿಂಡಿಗಳನ್ನು ಮನೆಯಲ್ಲಿ ಶೇಖರಿಸಿಟ್ಟುಕೊಳ್ಳಿ. ಮೇಲೆ ಹೇಳಿದ ಹೆಚ್ಚು ಪ್ರೋಟೀನ್ ಮತ್ತು ಕ್ಯಾಲೊರಿಯುಕ್ತ ಪಾನೀಯಗಳನ್ನು ದಿನವಿಡೀ **ಗುಟುಕು, ಗುಟುಕಾಗಿ** ಕುಡಿಯಿರಿ. 10 - 30 ನಿಮಿಷಗಳ ನಡಿಗೆ ಅಥವಾ ಸರಳ ವ್ಯಾಯಾಮಗಳು ಹಸಿವೆ ಮತ್ತು ಜೀರ್ಣಶಕ್ತಿಯನ್ನು ಉದ್ದೀಪಿಸುತ್ತದೆ.

3. ಬಾಯಿ ಹುಣ್ಣು ಮತ್ತು ಬಾಯಿ ಒಣಗುವಿಕೆ

ಅತಿ ಬಿಸಿ ಮತ್ತು ಅತಿ ತಣ್ಣಗಿನ ಪಾನೀಯಗಳು, ಹಣ್ಣಿನ ರಸ, ಹುಳಿ, ಉಪ್ಪು ಮತ್ತು ಖಾರಭರಿತ ಆಹಾರಗಳನ್ನು ದೂರವಿಡಿ. ಗಂಜಿ, ಪೊಂಗಲ್, ಪಾಯಸ ಮುಂತಾದ ಮೃದುವಾದ ಆಹಾರಗಳನ್ನು ಸೇವಿಸಿ. ಬ್ರೆಡ್, ಬಿಸ್ಕೀಟ್, ಚಕ್ಕುಲಿಗಳನ್ನು ಹಾಲು ಅಥವಾ ಕಾಫಿಯಲ್ಲಿ ಅದ್ದಿ ತಿನ್ನಿ. ಊಟ, ತಿಂಡಿಗಳೊಂದಿಗೆ ನೀರನ್ನು ಕುಡಿಯಿರಿ. ಬಾಯಲ್ಲಿ ಜೊಲ್ಲು ಸ್ರವಿಸುವಂತೆ ಮಾಡಲು ಸಕ್ಕರೆ ರಹಿತ chewing gum ಬಳಸಿ.
ಬಾಯಿ ಹುಣ್ಣು ವಾಸಿಯಾಗಲು ಉಪ್ಪು ನೀರಿನಲ್ಲಿ ಪ್ರತಿದಿನ 3-4 ಬಾರಿ ಬಾಯಿ ಮುಕ್ಕಳಿಸಿ

4. ವಾಕರಿಕೆ (nausea) ಮತ್ತು ವಾಂತಿಯಾಗುವಿಕೆ (vomiting)

ವಾಕರಿಕೆಯಾಗುತ್ತಿದ್ದರೆ, ಊಟಕ್ಕೆ ಮುಂಚೆ ಅರ್ಧ ಲೋಟ ಶುಂಟಿ ನೀರಿನಲ್ಲಿ ಮಾಡಿದ ಟೀ ಕುಡಿಯಿರಿ. ಊಟದ ಜೊತೆ ಕಹಿ, ಹುಳಿ, ಉಪ್ಪು, ಖಾರ ಬೆರೆತ ಮೆಂತ್ಯೆ ಗೊಜ್ಜು, ಹಾಗಲಕಾಯಿ ಚಟ್ನಿ, ಹುಣಿಸೇಹೊಕ್ಕು, ಉಪ್ಪಿನಕಾಯಿ ಮುಂತಾದ ಪದಾರ್ಥಗಳನ್ನು ನೆಂಚಿಕೊಳ್ಳಲು ಉಪಯೋಗಿಸಿ. ಶುಂಟಿ ನೀರನ್ನು ದಿನವಿಡೀ ಗುಟುಕು ಗುಟುಕಾಗಿ ಕುಡಿಯುತ್ತಿರಿ.
ವಾಂತಿಯಾಗುತ್ತಿದ್ದರೆ ಶುಂಟಿ ನೀರು, ಶುಂಟಿ ಟೀ, ಹದಮಜ್ಜಿಗೆ, ginger ale, flat lemonade, soda, Lucozade, Gatorade ಮುಂತಾದ ಪಾನೀಯಗಳನ್ನು ದಿನವಿಡೀ ಗುಟುಕು ಗುಟುಕಾಗಿ ಕುಡಿಯುತ್ತಿರಿ. 24 ಗಂಟೆಯೊಳಗೆ ವಾಂತಿ ನಿಲ್ಲದಿದ್ದರೆ ನಿಮ್ಮ ವೈದ್ಯರನ್ನು ನೋಡಿ.

ಶುಂಟಿ ನೀರು: ಹಿಂದಿನ ದಿನ ರಾತ್ರಿ ಒಂದು ಥರ್ಮಾಸ್ ಫ್ಲಾಸ್ಕಿನಲ್ಲಿ ಬಿಸಿ ನೀರು ಮತ್ತು 2 ಹೋಳು ಶುಂಟಿ ಹಾಕಿಡಿ. ಮಾರನೆಯ ದಿನ ಉಪಯೋಗಿಸಿ.

ಶುಂಟಿ ಟೀ: ಟೀ ಮಾಡುವಾಗ ಒಂದು ಹೋಳು ಶುಂಟಿ ಹಾಕಿ.

ಹದಮಜ್ಜಿಗೆ: ಶುಂಟಿ, ಈರುಳ್ಳಿ, ಜೀರಿಗೆ, ಮೆಣಸಿನಕಾಳು, ಉಪ್ಪು ಜಜ್ಜಿ, ನೀರು ಮಜ್ಜಿಗೆಗೆ ಬೆರಸಿ. ಒಂದೆರಡು ಗಂಟೆಗಳ ನಂತರ ಸೋಸಿ ಕುಡಿಯಿರಿ.

ವಾಂತಿಯಾಗುವುದು ನಿಂತ ಬಳಿಕ, 24 ಗಂಟೆಗಳ ಕಾಲ ದ್ರವ ಪದಾರ್ಥಗಳನ್ನು (ಕೊಬ್ಬುರಹಿತ **lactose free** ಹಾಲು, ಎಳೆನೀರು, ಮಜ್ಜಿಗೆ, ಹಣ್ಣಿನ ರಸ, ಬೇಳೆಕಟ್ಟಿನ ಸಾರು, ರಸಂ, ರಾಗಿ ಅಂಬಲಿ, ಗಂಜಿ ಇತ್ಯಾದಿ) ಮಾತ್ರ ಸೇವಿಸಿ. ಅನಂತರ ಕೊಬ್ಬುಸಹಿತ **lactose free** ಹಾಲು, ಪಾಯಸ, ಮುಂತಾದ ದ್ರವ ಪದಾರ್ಥಗಳನ್ನು ಮತ್ತು ಗಟ್ಟಿ ಪದಾರ್ಥಗಳನ್ನು (ಉಪ್ಪು, ಕಾರ ಕಡಿಮೆ ಇರಲಿ) ಸೇವಿಸಬಹುದು.

5. ಭೇದಿ

ಕೂಡಲೆ ವೈದ್ಯರನ್ನು ಬೇಟಿ ಮಾಡಿ, ಭೇದಿ ನಿಲ್ಲಲು ಮಾತ್ರೆ ಪಡೆಯಿರಿ. Dehydration ತಡೆಯಲು ಬಗೆ ಬಗೆಯ ಪಾನೀಯಗಳನ್ನು ಸೇವಿಸಿ. ಉದಾ: ನೀರು, ಎಳೆನೀರು, ನೀರು ಮಜ್ಜಿಗೆ, ನಿಂಬೆ ಪಾನಕ, ಫಾರ್ಮಸಿಗಳಲ್ಲಿ ದೊರಕುವ rehydration drinks, ಇತ್ಯಾದಿ. ಭೇದಿ ನಿಂತ ಬಳಿಕ ಮೂರು ದಿನಗಳ ಕಾಲ ಕೊಬ್ಬುರಹಿತ ಆಹಾರ ಮತ್ತು **lactose free skim milk** ಉಪಯೋಗಿಸಿರಿ.

6. ಮಲಬದ್ಧತೆ (constipation)

ಮಲಬದ್ಧತೆ ನಿವಾರಿಸಲು ದಿನಕ್ಕೆ 2 - 3 ಲೀಟರ್ ಪಾನೀಯಗಳನ್ನು ಸೇವಿಸಿ. ಉದಾ: ನೀರು, ಎಳೆನೀರು, ಹಣ್ಣಿನ ರಸ. ವಿಧವಿಧವಾದ ಹಣ್ಣು, ಮುಖ್ಯವಾಗಿ ಅಂಜೂರ ಮತ್ತು ಕರ್ಜೂರ, ತರಕಾರಿಗಳನ್ನು ಸಿಪ್ಪೆ ಸಹಿತ ತಿನ್ನಿ. ಚಪಾತಿ ಮಾಡಲು ತೌಡುಯುಕ್ತ ಗೋದಿಹಿಟ್ಟು ಬಳಸಿ. ವಿವಿಧ ಬೇಳೆ ಮತ್ತು ಕಾಳುಗಳು, ಕೊಬ್ಬುಳ್ಳ ಬೀಜಗಳನ್ನು (ಸೀಕುಂಬಳಕಾಯಿ ಬೀಜ, ಕಡ್ಲೇಕಾಯಿ ಇತ್ಯಾದಿ) ಪ್ರತಿದಿನ ಉಪಯೋಗಿಸಿ. 6 ಪ್ರೂನ್ ಹಣ್ಣುಗಳನ್ನು ಬಿಸಿ ನೀರಿನಲ್ಲಿ ರಾತ್ರಿಯಿಡೀ ನೆನೆಸಿ, ಬೆಳಿಗ್ಗೆ ಹಣ್ಣು ಮತ್ತು ನೀರನ್ನು ಸೇವಿಸಿ. ದಿನಕ್ಕೆ 30 ನಿಮಿಷ ಸರಳ ವ್ಯಾಯಾಮ (ಉದಾ: ನಡಿಗೆ, ಯೋಗ) ಮಾಡಿ.

ಕೊನೆಯ ಮಾತು: ಕ್ಯಾನ್ಸರ್ ಅನ್ನು ಪತ್ತೆ ಹಚ್ಚಿದ ಕೂಡಲೆ ಆಹಾರತಜ್ಞರನ್ನು (dietician) ಬೇಟಿಮಾಡಿ, ಸೂಕ್ತ ಆಹಾರ ಸೇವನೆಯ ಬಗ್ಗೆ ಸಲಹೆ ಪಡೆಯುವುದು ಬಹು ಮುಖ್ಯ. ಪ್ರತಿದಿನ ಬೆಳಿಗ್ಗೆ 1 ಲೋಟ ನೀರಿಗೆ ನಾಲ್ಕಾರು ಚಮಚೆ ನಿಂಬೆರಸ ಸೇರಿಸಿ ಕುಡಿಯಿರಿ. ರಾತ್ರಿ 1 ಲೋಟ ಬಿಸಿ ಹಾಲಿಗೆ ಅರಶಿಣ, ಜೀರಿಗೆ ಮತ್ತು ಮೆಣಸು ಪುಡಿಯನ್ನು ಸೇರಿಸಿ ಕುಡಿಯಿರಿ. ಇಷ್ಟವಿದ್ದಲ್ಲಿ ಸಕ್ಕರೆ ಬೆರಸಿ. ನೀರಿನ ಬದಲು ಶುಂಟಿ ನೀರನ್ನೇ ಉಪಯೋಗಿಸಿ.
ಬಗೆ ಬಗೆಯ ಹೆಚ್ಚು ಪ್ರೋಟೀನ್ ಮತ್ತು ಕ್ಯಾಲೊರಿಯುಕ್ತ ಪಾನೀಯಗಳನ್ನು ತಯಾರಿಸುವ ವಿಧಾನ ಬೇಕಾದಲ್ಲಿ ನನ್ನನ್ನು ಸಂಪರ್ಕಿಸಿ - rajijayadev2002@yahoo.com

ಹೆಚ್ಚಿನ ಮಾಹಿತಿಗೆ:
www.cancer.org.au
cancer council helpline 131120

ಲೇಖಕರು: ಬೇಲೂರು ರಾಮಮೂರ್ತಿ

ಬೈಲಹಳ್ಳಿ ದೇವರಿಗೆ ನಾಯಿಯೇ ಕಾವಲು ಎಂದರೆ ನಿಮಗೆ ಅಚ್ಚರಿ ಮೂಡಬಹುದು. ಅದರ ಕಥೆಯೂ ಸ್ವಾರಸ್ಯವಾಗಿದೆ. ಒಂದು ಸಾರಿ ದೇವರ ಸಾಲಿಗ್ರಾಮಕ್ಕೆ ಹಾಕಿದ್ದ ಸರವನ್ನು ಯಾರೋ ಕದ್ದರಂತೆ. ಹೇಗೆ ಹುಡುಕುವುದು ಅಂತ ಎಲ್ಲಾ ಯೋಚನೆಯಲ್ಲಿದ್ದಾಗ ಪೂಜಾರಿ ಚನ್ನಾಗಿ ಮೆಣಸಿನ ಕಾಯಿಯನ್ನು ಅರೆದು ಅದನ್ನು ಲಿಂಗಕ್ಕೆ ಹಚ್ಚಿದನಂತೆ. ಬೆಳಗಾಗುವುದರಲ್ಲಿ ನರಸೀಪುರದ ದಾರೀಲಿ ಹೋಗುತ್ತಿದ್ದವನಿಗೆ ಮೈಯೆಲ್ಲಾ ಉರಿ ಕಿತ್ಕೊಂಡು ಅವನು ತಾನು ಕದ್ದಿದ್ದ ಸಾಲಿಗ್ರಾಮದ ಸರದ ಸಮೇತ ಬಂದು ದೇವರಿಗೆ ಒಪ್ಪಿಸಿದನಂತೆ. ಅವನಿಗೆ ಶಿಕ್ಷೆಯಾಯಿತು. ಆದರೆ ಲಿಂಗಕ್ಕೆ ಮೆಣಸಿನಕಾಯಿ ಅರೆದಿದ್ದ ಉರಿ ಹೋಗಬೇಕಲ್ಲ. ಅದಕ್ಕೆ ಅರಮನೆಯಿಂದ ನೂರು ಹಸುಗಳಿಂದ ಹಾಲು ಕರೆಸಿ ಅಭಿಷೇಕ ಮಾಡಿದರಂತೆ. ಅಲ್ಲಿಂದೀಚೆಗೆ ಆ ನಾಯಿ ದೇವಸ್ಥಾನಕ್ಕೆ ಕಾವಲು ಇದೆಯಂತೆ.

ಇದನ್ನು ಓದುವಾಗ ತುಂಬಾ ಹಿಂದೆ, ಅಂದರೆ ಅರವತ್ತರ ದಶಕದಲ್ಲಿ ನೀವು ಕನ್ನಡ ಸಿನಿಮಾ ನೋಡುತ್ತಿದ್ದರೆ ಇಂಥದೇ ಒಂದು ಪ್ರಸಂಗ ಇರುವ ಸಿನಿಮಾ ನೆನಪಿಗೆ ಬರಬಹುದು. ಅದು ಚಂದವಳ್ಳಿಯ ತೋಟ. ಅದರಲ್ಲಿ ಊರಿನಲ್ಲಿ ಮಳೆ ಆಗಿಲ್ಲ. ಬೆಳೆ ಒಣಗಿ ಹೋಗಿದೆ. ಜಾನುವಾರುಗಳಿಗೆ ಕುಡಿಯುವ ನೀರಿಲ್ಲ. ನೆಲ ಬಿರುಕು ಬಿಟ್ಟಿದೆ. ಜನ ತತ್ತರಿಸಿ ಹೋಗಿದ್ದಾರೆ. ಊರಿನ ಜನ ಹನುಮಂತನಿಗೆ ವಿಶೇಷ ಪೂಜೆ ಮಾಡಿ ಬೇಡಿಕೊಳ್ಳೋಣ ಅಂದ್ರೆ ಊರಿನ ಗೌಡ ಹನುಮಂತನಿಗೆ ಪೂಜೆ ಮಾಡ್ತೀನಿ ಎಂದು ಮನೆಗೆ ಹೋಗಿ ಮೆಣಸಿನ ಕಾಯಿಯನ್ನು ಚೆನ್ನಾಗಿ ಅರೆದು ತಂದು ಹನುಮಂತನ ಹೊಟ್ಟೆಗೆ ಸವರಿ, ನೀನು ನಮ್ಮ ಊರಿಗೆ ಮಳೆಯಾಗದಂತೆ ಮಾಡಿ ನಮ್ಮ ಊರಿನ ಜನರ ಹೊಟ್ಟೆ ಉರಿಸ್ತಾ ಇದೀಯಲ್ಲ, ನಿನ್ನ ಹೊಟ್ಟೆಯೂ ಹೀಗೆಯೇ ಉರಿಯಲಿ ಅಂತಾನೆ. ಕಾಕತಾಳೀಯ ಎನ್ನುವಂತೆ ಮಾರನೇ ದಿನವೇ ಮಳೆ ಬರುತ್ತದೆ.

ಒಂದು ನಾಯಿಯ ಪ್ರಸಂಗ ಇನ್ನೂ ಚನ್ನಾಗಿದೆ. ಒಂದು ಸಾರಿ ಒಬ್ಬ ಕುರುಬ ತನ್ನ ಮುನ್ನೂರು ಕುರಿ ಹೊಡ್ಕೊಂಡು ಬರ್ತಿದ್ನಂತೆ. ಅವನ ಗುಂಪಿನಿಂದ ಎರಡು ಕುರಿ ತಪ್ಪಿಸಿಕೊಂಡು ಹೋದುವಂತೆ. ಅವುಗಳನ್ನು ಹುಡುಕುತ್ತಾ ಹೋದವನಿಗೆ ಕಂಡದ್ದು ಇನ್ನೊಂದು ಕುರಿ ಹಿಂಡು. ಆ ಗುಂಪಿನವನಿಗೆ ನನ್ನ ಎರಡು ಕುರಿಗಳು ನಿನ್ನ ಕುರಿ ಗುಂಪಿಗೆ ಸೇರಿಕೊಂಡಿದೆ ಅಂದನಂತೆ. ಅದಕ್ಕೆ ಆ ಗುಂಪಿನವನು ನನ್ನ ನಾನೂರು ಕುರೀಲಿ ನಿನ್ನ ಎರಡು ಕುರಿ ಯಾವುದು ಅಂತ ಹುಡುಕೋದು, ಕಂಡುಹಿಡಿಯೋದು ಹೇಗೆ. ನೀನೇ ನೋಡಿ ಕರ್ಕೊಂಡು ಹೋಗು ಅಂದ್ನಂತೆ. ಇವನಿಗೂ ತನ್ನ ಕುರಿ ಹುಡುಕೋದು ಕಷ್ಟವೇ ಆಯಿತು. ಆ ಕುರುಬನ ಹತ್ತಿರ ಒಂದು ನಾಯಿ ಇತ್ತು. ಅದರ ಹೆಸರು ಸಿಂಗ ಅಂತ. ಅವನು ನಾಯಿಯನ್ನು ಸವರಿ, ಸಿಂಗ ಹೋಗೋ ನನ್ನ ಕುರಿ ಕರ್ಕೊಂಡು ಬಾ ಅಂದ್ನಂತೆ. ಆಗ ನಾಯಿ ಕುರಿ ಗುಂಪಿಗೆ ಹೋಗಿ ಅತ್ತಿತ್ತ ಓಡಾಡಿ, ಮೂಸಿ ನೋಡಿ ಕಡೆಗೂ ತನ್ನ ಯಜಮಾನನ ಎರಡು ಕುರಿಗಳನ್ನು ಕರೆದುಕೊಂಡು ಬಂತಂತೆ.

ಈ ಪ್ರಸಂಗ ಓದಿದಾಗ ಒಂದು ಹಿಂದಿ ಸಿನಿಮಾ ನಿಮಗೆ ನೆನಪಿಗೆ ಬಂತೇ, ನನಗಂತೂ ನೆನಪಿಗೆ ಬಂತು. ಅದು ರಾಜೇಶ್ ಖನ್ನಾ ಅಭಿನಯದ ಸಚ್ಚಾ ಝೂಟ. ಅದರಲ್ಲಿ ನಾಯಕ ದ್ವಿಪಾತ್ರಧಾರಿ. ಒಬ್ಬ ಒಳ್ಳೆಯವನು ಇನ್ನೊಬ್ಬ ಕೆಟ್ಟವನು. ಆದರೆ ಸ್ವತ: ಅವನ ತಂಗಿಗೇ ತನ್ನ ನಿಜವಾದ ಅಣ್ಣ ಯಾರು ಅಂತ ತಿಳಿಯೋದಿಲ್ಲ. ನ್ಯಾಯಾಲಯದಲ್ಲಿ ಇಬ್ಬರೂ ಇರ್ತಾರೆ. ಇಬ್ಬರೂ ಒಂದೇ ರೀತಿ ವರ್ತಿಸುತ್ತಾರೆ. ಆಗ ನ್ಯಾಯಾಧೀಶರಿಗೂ ಗೊಂದಲ. ಆಗ ತಂಗಿ ಹೇಳ್ತಾಳೆ ನಮ್ಮನೇಲಿ ಒಂದು ನಾಯಿ ಇದೆ. ಅದು ನನ್ನ ಅಣ್ಣನನ್ನ ಗುರುತು ಹಿಡಿಯುತ್ತೆ ಅಂತ. ಹಾಗೆ ನಾಯಿ ನ್ಯಾಯಾಲಯಕ್ಕೆ ಬಂದು ತನ್ನ ನಿಜವಾದ ಯಜಮಾನನ್ನ ಗುರುತು ಹಿಡಿಯುತ್ತೆ. ಒಳ್ಳೆಯವನನ್ನು ಬಿಡುಗಡೆ ಮಾಡುತ್ತಾರೆ, ಕೆಟ್ಟವನಿಗೆ ಶಿಕ್ಷೆಯಾಗುತ್ತದೆ.

“ನಮ್ಮ ಊರಿನ ರಸಿಕರು” ಪುಸ್ತಕದಲ್ಲಿ ಇರುವ ಲೇಖನಗಳೆಲ್ಲಾ ಅತ್ಯಂತ ಮನೋಜ್ಞವಾಗಿವೆ. ಒಂದೊಂದು ಲೇಖನದ್ದೂ ಒಂದೊಂದು ಸೊಗಸು. ಎಲ್ಲವನ್ನೂ ಉದಾಹರಿಸಲು ಕಷ್ಟ. ಅದರಲ್ಲಿ ಇಬ್ಬರು ಸ್ನೇಹಿತರು ಮನೆ ಕಡೆ ಹೋಗ್ತಾ ಇರ್ತಾರೆ. ದಾರೀಲಿ ಬಾಳೆ ಹಣ್ಣು ಕಂಡಾಗ ಒಬ್ಬ ಬಾಳೆ ಹಣ್ಣು ಕೊಂಡ್ಕೊಳೋಣ್ವಾ ಅಂತ ಕೇಳಿದರೆ ಇನ್ನೊಬ್ಬ ನನಗೆ ಬೇಡ ನೀನು ಬೇಕಾದರೆ ಕೊಂಡ್ಕೊ ಅಂತಾನೆ. ಸರಿ ಒಬ್ಬ ಎರಡಾಣೆಗೆ 5 ಬಾಳೆ ಹಣ್ಣು ಮತ್ತೆ ಬೆಲ್ಲ ಕೊಂಡ್ಕೊತಾನೆ. ಅವನು ಒಂದು ಬಾಳೆಹಣ್ಣು ಸುಲಿದು ತಿನ್ನುವಾಗ ಇನ್ನೊಬ್ಬನೂ ತಾನೂ ಒಂದು ಹಣ್ಣು ತಿನ್ನುತ್ತಾನೆ. ಮತ್ತೆ ಇನ್ನೊಂದನ್ನೂ ತಿನ್ನುತ್ತಾನೆ. ಆಗ ಮೊದಲನೆಯವನು ಏನಯ್ಯಾ ಬಾಳೆ ಹಣ್ಣು ಬೇಡ ಅಂದ್ಯಲ್ಲ ಅಂದ್ರೆ ಹೌದು ಬೇಡ ಅಂದಿದ್ದೆ. ಆದರೆ ನೀನು ತಿನ್ನುತ್ತಿರುವಾಗ ನಾನು ಯಾಕೆ ಸುಮ್ಮನೆ ಕೂತಿರಬೇಕು ಅದಕ್ಕೇ ನನಗೂ ತಿನ್ನಬೇಕು ಅನಿಸಿತು ಅದಕ್ಕೆ ತಿಂದೆ ಅಂದನಂತೆ. ಅಲ್ಲಿಗೆ ಬಾಳೆಹಣ್ಣಿನ ಖರ್ಚು ಉಳಿಸಿದ್ದೂ ಆಯಿತು, ಹೊಟ್ಟೆ ತುಂಬಿಸಿಕೊಂಡಿದ್ದೂ ಆಯಿತು.

ಗರುಡಗಂಬದ ದಾಸಯ್ಯ ಯಾರೂ ಮರೆಯಲಾರದ ಲೇಖನ. ಇದು ಅವರ ಅನುಭವವೇ ಹೌದು. ಗೊರೂರು ಒಂದು ಸಾರಿ ಊರಿಗೆ ಹೊರಟಾಗ ಅವರೂರಿನ ದಾಸಯ್ಯ ಸ್ವಾಮಿ ಬರುವಾಗ ನನಗೆ ಒಂದು ಗರುಡ ಗಂಬ ತಂದ್ಕೊಡಿ. ನಾನಂತೂ ಹೋಗಕ್ಕೆ ಆಗಲ್ಲ. ಈಗ ಇರೋ ಗರುಡಗಂಬ ಹಾಳಾಗಿದೆ ಅಂತ ಬೇಡಿಕೊಂಡಾಗ ಗೊರೂರರು ಆಗಲಿ ಅಂತ ಒಪ್ಪಿಕೊಳ್ಳುತ್ತಾರೆ. ಆದರೆ ಅವರು ಸಂತೆಗೆ ಹೋಗೋದು, ಗರುಡಗಂಬ ಕೊಂಡ್ಕೊಳ್ಳೋದು, ಅದನ್ನು ತರೋದರಲ್ಲಿ ಕಷ್ಟಪಡೋದು, ಕಡೆಗೆ ರೈಲಿನಲ್ಲಿ ಅದನ್ನು ಇಟ್ಟುಕೊಂಡು ಕೂತಾಗ ಅಕ್ಕಪಕ್ಕದ ಪ್ರಯಾಣಿಕರಿಗೆ ಆಗೋ ತೊಂದರೆ. ಗೊರೂರರನ್ನೇ ದಾಸಯ್ಯ ಅಂದ್ಕೊಂಡು ಏನೇನೋ ಪ್ರಶ್ನೆಗಳನ್ನು ಕೇಳೋದು, ಇವೆಲ್ಲ ತುಂಬಾ ಕುತೂಹಲಕಾರಿಯಾಗಿ ಮೂಡಿಬಂದಿದೆ.

ಕಡೆಗೆ ಅವರು ರೈಲ್ವೇ ಸ್ಟೇಷನ್ನಿನಲ್ಲಿ ಇಳಿದು ಗರುಡಗಂಬವನ್ನು ಬಹಳ ಪ್ರಯಾಸ ಪಟ್ಟು ತೆಗೆದುಕೊಂಡು ಹೋಗ್ತಿದ್ದಾಗ ಸ್ಟೇಷನ್ ಮಾಸ್ಟರು, ಯಾರೋ ಅದು ದಾಸಯ್ಯ ಅಂತ ಕೂಗಿದರೆ ಅದುವರೆಗೂ ತಡೆದುಕೊಂಡಿದ್ದ ಸಿಟ್ಟು ನುಗ್ಗಿಬಂದು ಗೊರೂರರು, ಸ್ಟೇಷನ್ ಮಾಸ್ಟರ್ ಕಡೆ ತಿರುಗಿ ನೀನು ದಾಸಯ್ಯ, ನಿಮ್ಮಪ್ಪ ದಾಸಯ್ಯ ಅಂದು ಅಲ್ಲಿಂದ ನಡೆಯುತ್ತಾರೆ.

ಗೊರೂರರ ಲೇಖನಗಳ ವೈಶಿಷ್ಟ್ಯ ಅಂದರೆ ಅವರು ಎಲ್ಲಿಯೂ ಹಾಸ್ಯ ಲೇಪನ ಮಾಡೋಕೆ ಹೋಗಿಲ್ಲ. ಬೇಡದ ಉಪಮೆಗಳನ್ನಾಗಲೀ, ಪ್ರಾಸಗಳನ್ನಾಗಲೀ ಬಳಸೋ ಕಸರತ್ತು ಮಾಡಿಲ್ಲ. ದೊಡ್ಡ ದೊಡ್ಡ ಶಬ್ದಗಳನ್ನು ಪ್ರಯೋಗ ಮಾಡಿಲ್ಲ. ಅನ್ಯಥಾ ವಿಷಯಗಳನ್ನು ಬಳಸಿಲ್ಲ. ಘಟನೆಗಳನ್ನು ತಾವು ಹೇಗೆ ನೋಡಿದರೋ ಹಾಗೇ ಪ್ರಸ್ತುತ ಪಡಿಸಿದ್ದಾರೆ. ಹೀಗಾಗಿ ಅವು ನಮ್ಮ ನಿಮ್ಮ ನಡೆಯುತ್ತಿರವಂಥ ಘಟನೆಗಳೇ ಅನಿಸಿಬಿಡುತ್ತದೆ. ಒಬ್ಬ ಲೇಖಕ ಎಲ್ಲಿ ಹೋದರೂ ಅನುಭವದ ಮೂಟೆಯನ್ನು ಹೊತ್ತುಕೊಂಡು ಬರಬೇಕು ಎನ್ನುವುದು ಗೊರೂರಿಂದ ನಾವು ಕಲಿಯಬೇಕಾದ ವಿಷಯ. ಅವರು ಅಮೆರಿಕಾಕ್ಕೆ ಹೋದಾಗಿನ ಅನುಭವಗಳನ್ನು ಅಮೆರಿಕಾದಲ್ಲಿ ಗೊರೂರು ಅಂತ ಬರೆದಿದ್ದಾರೆ. (ಇಲ್ಲಿ ನನಗೂ ಅವರಿಗೂ ಮತ್ತೊಂದು ಸ್ವಾಮ್ಯವಿದೆ – ಅವರು ಅಮೆರಿಕಾ ಪ್ರವಾಸ ಮಾಡಿ ಬಂದಾದ ಮೇಲೆ "ಅಮೆರಿಕಾದಲ್ಲಿ ಗೊರೂರು ಬರೆದರೆ" ನಾನು ಜಪಾನ್ ಪ್ರವಾಸ ಮಾಡಿ ಬಂದು " ಜಪಾನಿನಲ್ಲಿ ಬೇಲೂರು" ಬರೆದೆ)

ಕನ್ನಡ ಸಾರಸ್ವತ ಲೋಕಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ ಗೊರೂರು ಸ್ವಾತಂತ್ರ್ಯ ಚಳುವಳಿಯ ಸಿಹಿ ಕಹಿಗಳನ್ನೂ ಉಂಡವರು. ಗೊರೂರರಿಗೆ 1974ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. 1982ರಲ್ಲಿ ಸಿರಸಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇದರ ಜೊತೆಗೆ ಅವರ " ಅಮೆರಿಕಾದಲ್ಲಿ ಗೊರೂರು " ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಗೊರೂರರು ಬರೆದ ಬರವಣಿಗೆ ತುಂಬಾ ಅಪರೂಪದ್ದು ಮತ್ತು ತುಂಬಾ ಅನುರೂಪವಾದದ್ದು. ಈಗ ಗೊರೂರು ನಮ್ಮಲ್ಲಿಲ್ಲ. ಅವರು ಕಂಡಂಥ ಸಮಾಜವೂ ನಮ್ಮಲ್ಲಿಲ್ಲ. ಎಲ್ಲವೂ ಬದಲಾವಣೆಗೊಳ್ಳುತ್ತಿವೆ. ಆದರೆ ಗೊರೂರರಂಥ ಮಹನೀಯರನ್ನು ನೆನೆಸಿ ಮುನ್ನಡೆಯುವ ಅವಕಾಶ ಸಿಕ್ಕಿದ್ದು ನಮ್ಮ ಪುಣ್ಯ. ▪

ಪಂಚತಂತ್ರ ಕಥೆಗಳು

ಮಾಲು, ಅಡಿಲೈಡ್

ವಿಷ್ಣು ಶರ್ಮ ಮನುಷ್ಯನ ಜೀವನಕ್ಕೆ ಅವಶ್ಯಕತೆ ಇರುವ ಐದು ತಂತ್ರಗಳನ್ನು ಕಥಾ ರೂಪದಲ್ಲಿ ಹೇಳಿ ಒಬ್ಬ ರಾಜನ ದಡ್ಡ ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡಿದ ಕಥಾ ಮಾಲೆಯೇ 'ಪಂಚ ತಂತ್ರ'. 'ಮಿತ್ರ ಬೇಧ', 'ಮಿತ್ರ ಲಾಭ', 'ಕಾಕೋಲುಕೀಯ', 'ಲಬ್ಧ ಪ್ರಣಾಶ' ಮತ್ತು 'ಅಪರೀಕ್ಷಿತ ಕಾರಕ' ಇವುಗಳು ಆ ಐದು ತಂತ್ರಗಳು ಅಥವಾ ಯುಕ್ತಿಗಳು. ಮೊದಲನೆಯ ತಂತ್ರ 'ಮಿತ್ರ ಬೇಧ'ದಿಂದ ಆಯ್ದ ಕಥೆಯೊಂದು ಇಲ್ಲಿದೆ:

ಒಬ್ಬ ರಾಜ ಇದ್ದ. ಇವನಿಗೆ ಎಲ್ಲರಲ್ಲೂ ನಂಬಿಕೆ ಕಡಿಮೆ. ಈ ರಾಜ ಬಹಳ ಯೋಚಿಸಿ, ಒಂದು ಮಂಗನನ್ನು ತರಿಸಿ, ಅದಕ್ಕೆ ಬೇಕಾದ ತರಬೇತಿ ಕೊಟ್ಟು ಅದನ್ನು ಖಾಸಾ ಸ್ನೇಹಿತನನ್ನಾಗಿ ಮಾಡಿಕೊಂಡ. ಆ ಮಂಗನಿಗೋ ಅಪರಿಮಿತ ಆನಂದ! ರಾಜ ಮರ್ಯಾದೆ, ರಾಜನ ಜೊತೆ ಸ್ನೇಹ ಮತ್ತು ಸದಾ ರಾಜ ಭೋಗ ಇವುಗಳನ್ನು ಅನುಭವಿಸಿ ತನಗೆ ಕೊಟ್ಟ ಸ್ವಾತಂತ್ರ್ಯವನ್ನು ಯಥೇಚ್ಛವಾಗಿ ಬಳಸಿಕೊಂಡು ಸಂತಸ ಪಡುತಿತ್ತು.

ಈ ಗೆಳೆಯ ರಾಜನಿಗೆ ಯಾವಾಗಲೂ ಕೃತಜ್ಞನಾಗಿರಬೇಕು ಮತ್ತು ಅವನಿಗೆ ಪ್ರತ್ಯುಪಕರಿಸಬೇಕು ಎಂಬುದು ಮಂಗನ ಮನಸಿನಲ್ಲಿ ಇತ್ತು. ಒಂದು ಬೇಸಿಗೆಯ ಸಂಜೆ, ಮೆತ್ತನೆಯ ಹಾಸಿಗೆಯಲ್ಲಿ ರಾಜ ಮಲಗಿದ್ದ. ಅಲ್ಲೇ ಓಡಾಡುತ್ತಿದ್ದ ಮಂಗನ ಮನಸ್ಸು ಜಾಗೃತವಾಗಿ, ಉಪಕರಿಸಲು ಇದೇ ಸಮಯವೆಂದು, ರಾಜನಿಗೆ ಬೀಸಣಿಗೆಯಿಂದ ಗಾಳಿ ಬೀಸಲು ಪ್ರಾರಂಭಿಸಿತು. ಒಂದು ನೊಣ ರಾಜನ ಮುಖದ ಮೇಲೆ ಕುಳಿತುಕೊಂಡಿತು.

ರಾಜನ ನಿದ್ರಾ ಭಂಗ ನೊಣದಿಂದ ಎಲ್ಲಿ ಆಗುತ್ತದೋ ಎಂದು ಆ ನೊಣವನ್ನು ಓಡಿಸಲು ಜೋರಾಗಿ ಗಾಳಿ ಬೀಸಲು ಪ್ರಾರಂಭಿಸಿತು. ಆದರೂ ನೊಣ ಹಾರಿ ಹೋಗದೆ, ರಾಜನ ಮುಖದ ಮೇಲೆಯೇ ಓಡಾಡುತ್ತಿತ್ತು.

ನೊಣ ಓಡಿಸಲಾಗದ್ದಕ್ಕೆ ಮಂಗನಿಗೆ ಮೈಯೆಲ್ಲಾ ಉರಿ! ರಾಜನ ಪಕ್ಕದಲ್ಲಿದ್ದ ಬಿಚ್ಚು ಕತ್ತಿಯನ್ನು ನೋಡಿತು, ಅದನ್ನು ತೆಗೆದು ಆ ನೊಣದ ಮೇಲೆ ಬೀಸಿತು. ಮಂಗನ ಉದ್ದೇಶ ಫಲಿಸಿತು! ನೊಣ ಹಾರಿ ಹೋಯಿತು. ಆದರೆ ರಾಜ ತಲೆ ಸೀಳಿ ಸತ್ತ!

ನಾವು ಉತ್ತಮ ಸ್ನೇಹಿತರನ್ನು ನಮ್ಮ ಜೀವನದಲ್ಲಿ ಹೊಂದಿರಬೇಕು ಎಂಬುದು ಈ ಮೇಲಿನ ಕಥೆಯ ನೀತಿ.

"ಮೂಢ ಮೂರ್ಖೋ ಗಾರ್ಧಭೋ ಏಕ ರಾಶಿಹಿ"! (ಅರ್ಥ: ಮೂಢ, ಮೂರ್ಖ ಮತ್ತು ಗಾರ್ಧಭ ಇವರೆಲ್ಲರ ಹುಟ್ಟಿನ ರಾಶಿ ಒಂದೇ!)

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಛೀಟಿವಿಯ ಎಲೆಕ್ಷನ್ ಬುಲೆಟಿನ್

ಗುಡ್ ಮಾರ್ನಿಂಗ್ ವ್ಯೂಯರ್ಸ್. ಛೀಟಿವಿಯ ಎಲೆಕ್ಷನ್ ಸ್ಪೆಷಲ್ ಕಾರ್ಯಕ್ರಮಕ್ಕೆ ನಿಮಗೆ ಸ್ವಾಗತ. ನಾನು ನಿಮ್ಮ ನೆಚ್ಚಿನ ಆ್ಯಂಕರ್ ಇಂದುಶ್ರೀ. ಎಲೆಕ್ಷನ್‌ಗೆ ಇನ್ನು ಕೆಲವೇ ಗಂಟೆಗಳು ಉಳಿದಿವೆ. ಪೋಲಿಂಗ್ ಬೂತ್‌ಗಳ ಬಳಿ ಯಾವುದೇ ಪಕ್ಷದ ಚಿಹ್ನೆಗಳನ್ನು ತೋರಿಸುವಂತಿಲ್ಲ. ಈ ಹಿನ್ನೆಲೆಯಲ್ಲಿ ಹಲವಾರು ಮುನ್ನೆಚ್ಚರಿಕೆಗಳನ್ನ ತೊಗೋಬೇಕಾಗತ್ತೆ. ಈ ಸಂದರ್ಭದಲ್ಲಿ ಎಲೆಕ್ಷನ್ ಕಮಿಷನ್ ಏನೇನು ಕ್ರಮಗಳನ್ನ ತೆಗೆದುಕೊಂಡಿದೆ ಅಂತ ತಿಳಿಸೋಕೆ ನಮ್ಮ ರಿಪೋರ್ಟರ್ ಡಿಂಕು ಪೋಲಿಂಗ್ ಬೂತ್ ಹತ್ತಿರವೇ ಇದ್ದಾರೆ. ಬನ್ನಿ ಡಿಂಕು ಅವರನ್ನ ಏನೇನು ಕ್ರಮಗಳನ್ನ ತೆಗೆದುಕೊಳ್ಳಲಾಗಿದೆ ಅಂತ ಕೇಳೋಣ.

ಡಿಂಕು ಅವರೆ ಅಲ್ಲಿ ನಿಜಕ್ಕೂ ಏನು ನಡೀತಾ ಇದೆ.

ಡಿಂಕು: ಒಂದು ಮಗು, ಇಬ್ಬರು ಮುದುಕರು ನಡೀತಾ ಇದಾರೆ ಮೇಡಮ್

ಇಂದುಶ್ರೀ: ಅದಲ್ಲ ಡಿಂಕು ಅವರೆ, ಈ ಪೋಲಿಂಗ್ ಬೂತ್, ಮತಗಟ್ಟೆ ಬಳಿ ಏನು ನಡೀತಾ ಇದೆ ಅಂತ

ಡಿಂಕು: ಎರಡು ಎಮ್ಮೆಗಳು, ಒಂದು ಕುರಿ ನಡೀತಾ ಇವೆ ಮೇಡಂ

ಇಂದುಶ್ರೀ: ವೀಕ್ಷಕರೆ ಪೋಲಿಂಗ್ ಬೂತ್ ಬಳಿ ಯಾವ ಪಕ್ಷದವರೂ ಇರೋಹಾಗಿಲ್ಲ ಅಂತ ಹೇಳಿದ್ರೂ ಇಬ್ಬರು ಎಮ್ಮೆಲ್ಲೆಗಳು, ಒಬ್ಬ ಶ್ರೀಸಾಮಾನ್ಯ ಅಲ್ಲಿ ಇದಾರೆ ಅಂತ ಡಿಂಕು ಹೇಳ್ತಾ ಇದಾರೆ. ಡಿಂಕು, ಎಮ್ಮೆಲ್ಲೆಗಳು ಯಾವ ಪಾರ್ಟಿ, ಆ ವ್ಯಕ್ತಿ ಯಾರು ಅಂತ ಏನಾದರೂ ಮಾಹಿತಿ ಸಿಕ್ತಾ?

ಡಿಂಕು: ಎಮ್ಮೆಲ್ಲೆ ಅಲ್ಲ ಮೇಡಮ್. ಸರಿಯಾಗಿ ಕೇಳಿಸ್ಕೊಳಿ ಮೇಡಂ, ಇಲ್ಲಿ ತುಂಬಾ ಕಾಗದಗಳು, ಪಾಂಪ್ಲೆಟ್ಟುಗಳು, ಹುಲ್ಲಿನ ಹೊರೆ ಎಲ್ಲಾ ಬಿದ್ದಿದ್ದು. ಅದನ್ನ ತಿನ್ನಕ್ಕೆ ಎಮ್ಮೆಗಳು, ಕುರಿ ಬಂದಿವೆ ಮೇಡಂ

ಇಂದುಶ್ರೀ: ಡಿಂಕು ಅವರೆ, ಅಲ್ಲಿ ಏನು ನಡೀತಾ ಇದೆ ಅಂದ್ರೆ ಎಮ್ಮೆ, ಕುರಿ ಅಂತೆಲ್ಲಾ ಹೇಳಿ ವೀಕ್ಷಕರ ಸಮಯ ಹಾಳು ಮಾಡಬೇಡಿ. ಪೋಲಿಂಗ್ ಬೂತಲ್ಲಿ ಏನು ನಡೀತಿದೆ ಅಂತ ಸರಿಯಾಗಿ ನೋಡಿ ಹೇಳಿ

ಡಿಂಕು: ಒಂದು ನಿಮಿಷ ಬಂದೆ ಮೇಡಂ (ಕೊಂಚ ಗ್ಯಾಪ್ ನಂತರ) ಒಳಗೆ ಹೋಗಿ ನೋಡಿ ಬಂದೆ. ಇಲ್ಲಿ ಗೋಡೆಗೆ ಒಂದು ಗಡಿಯಾರ ಹಾಕಿದಾರೆ, ಅದು ನಡೀತಾ ಇದೆ ಮೇಡಂ

ಇಂದುಶ್ರೀ: ಡಿಂಕು ಅವರೆ, ಅಲ್ಲಿ ರಾಜಕೀಯಕ್ಕೆ ಸಂಬಂಧ ಪಟ್ಟಂತೆ ಏನು ಮುಂಜಾಗರೂಕತೆ ತೊಗೊಂಡಿದ್ದಾರೆ ಅನ್ನೋದನ್ನ ಮಾತ್ರ ಹೇಳಿ. ಪ್ಲೀಸ್, ಪ್ಲೀಸ್

ಡಿಂಕು: ಈ ಚುನಾವಣಾ ಸಂಹಿತೆ ಬಗ್ಗೇನಾ ಮೇಡಂ?

ಇಂದುಶ್ರೀ: ಸಧ್ಯ! ಅರ್ಥ ಮಾಡಿಕೊಂಡಿರಲ್ಲ. ಹೌದು, ಚುನಾವಣಾ ಸಂಹಿತೆಯ ಬಗ್ಗೆಯೇ ಹೇಳಿ.

ಡಿಂಕು: ಈ ಪೋಲಿಂಗ್ ಬೂತ್ ಹತ್ರ ಒಂದು ಸರ್ಕಲ್ ಇದೆ. ಆ ಸರ್ಕಲ್ಲಲ್ಲಿ ದಿನಾ ಒಬ್ಬ ಟ್ರಾಫಿಕ್ ಪೊಲೀಸ್ ಇರ್ತಾ ಇದ್ದ. ಇವತ್ತು ಅವನು ಬಂದಿಲ್ಲ

ಇಂದುಶ್ರೀ: ಯಾಕೆ?

ಡಿಂಕು: ವೆಹಿಕಲ್‌ಗಳು ನಿಲ್ಲಕ್ಕೇಂತ ಸ್ಟಾಪ್ ಸಿಗ್ನಲ್ ತೋರಿಸಿದರೆ ಕಾಂಗ್ರೆಸ್‌ನ ಸಿಂಬಲ್ ತೋರಿಸಿದಹಾಗೆ ಆಗತ್ತೆ ಅಂತ.

ಇಂದುಶ್ರೀ: ಇನ್ನೇನು ಮಾಡಿದಾರೆ ಅಲ್ಲಿ?

ಡಿಂಕು: ಇಲ್ಲಿ ಒಂದು ಕೈ ನೋಡಿ ಭವಿಷ್ಯ ಹೇಳೋ ಅಂಗಡಿ ಇತ್ತು, ಅದನ್ನ ಕ್ಲೋಸ್ ಮಾಡ್ಸಿದಾರೆ ಮೇಡಂ.

ಇಂದುಶ್ರೀ: ಇದಿಷ್ಟೂ ಕಾಂಗ್ರೆಸ್ ಸಿಂಬಲ್ ಬಗ್ಗೆ ಆಯ್ತು. ಇತರ ಪಕ್ಷಗಳ ಸಿಂಬಲ್‌ಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಡಿಂಕು?

ಡಿಂಕು: "ಈ ಬೀದಿಯಲ್ಲಿ ಮಹಿಳೆಯರು ತಲೆಯ ಮೇಲೆ ತೆನೆ ಹೊರುವುದನ್ನು ನಿಷೇಧಿಸಲಾಗಿದೆ. ತೆನೆ ಹೊರಲೇಬೇಕಿದ್ದರೆ ಅದನ್ನು ಗಂಡಸರ ಮೇಲೆ ಹೊರಿಸಿರಿ. ಇಲ್ಲಿ ಓಡಾಡುವ ಮಹಿಳೆಯರು ಹಸಿರು ಸೀರೆ ಉಡುವುದನ್ನು ನಿಷೇಧಿಸಲಾಗಿದೆ" ಅಂತ ಬೋರ್ಡ್ ಹಾಕಿದಾರೆ ಮೇಡಂ

ಇಂದುಶ್ರೀ: ಅದು ಜೆಡಿಎಸ್ ಸಿಂಬಲ್ ಬಗ್ಗೆ ಆಯ್ತು.

ಡಿಂಕು: ಗಣೇಶನ ಹಬ್ಬ, ಅನಂತನವ್ರತದ ಟೈಮಲ್ಲಿ ಎಲೆಕ್ಷನ್ ಇಡದೇ ಇರೋದು ಒಳ್ಳೇದಾಯ್ತು ಅಂತ ಇಲ್ಲೊಬ್ರು ಹೇಳ್ತಿದ್ರು ಮೇಡಂ

ಮುಂದಿನ ಪುಟ ನೋಡಿ ...

ಇಂದುಶ್ರೀ: ಯಾಕಂತೆ?

ಡಿಂಕು: ಆ ಹಬ್ಬಗಳನ್ನ ಮಾಡಕ್ಕೆ ಕಮಲದ ಹೂವು ಬೇಕಲ್ಲಾ ಮೇಡಂ. ಕಮಲದ ಹೂವು ಕೈಲಿ ಹಿಡ್ಕೊಂಡು ಹೋದ್ರೆ ಸಂಹಿತೆ ಉಲ್ಲಂಘನೆ ಅಂತ ಕೇಸ್ ಆಗ್ತಿತ್ತಲ್ವ ಮೇಡಂ

ಇಂದುಶ್ರೀ: ನಿಜಾನೇ. ಆದರೆ ಈಗ ಆ ಪ್ರಾಬ್ಲಂ ಇಲ್ಲವಲ್ಲ

ಡಿಂಕು: ಆದರೆ ಇನ್ನೊಂದು ಪ್ರಾಬ್ಲಂ ಆಗಿದೆ ಮೇಡಂ. ಅದ್ಯಾರೋ ಒಬ್ರು ಟೇಪ್‌ರೆಕಾರ್ಡರ್‌ನಲ್ಲಿ ಜೋರಾಗಿ ಹಾಡು ಹಾಕ್ಕೊಂಡು ಹೋಗ್ತಾ ಇದ್ರು ಮೇಡಂ. ಅವರನ್ನ ಅರೆಸ್ಟ್ ಮಾಡಿದಾರೆ.

ಇಂದುಶ್ರೀ: ಯಾಕಂತೆ?

ಡಿಂಕು: ಆ ಹಾಡು ಹಾಗಿತ್ತು ಮೇಡಂ.

ಇಂದುಶ್ರೀ: ಯಾವ ಹಾಡು ಅದು?

ಡಿಂಕು: ಕಮಲದ ಮುಖದವ್ಳೆ ಕಮಲದ ಕೈಯವಳೆ ಕಮಲದ ಮೇಲೆ ನಿಂತವಳೆ...

ಇಂದುಶ್ರೀ: ಇನ್ಯಾವ್ಯಾವ ಹಾಡು ಬ್ಯಾನ್ ಮಾಡಿದಾರೆ ಡಿಂಕು?

ಡಿಂಕು: ಹನಿ ಹನಿಗೂಡಿದ್ರೆ ಹಳ್ಳ, ತೆನೆತೆನೆ ಕೂಡಿದ್ರೆ ಬಳ್ಳ ಹಾಡು ಕೂಡ ಬ್ಯಾನ್ ಮಾಡಿದಾರೆ.

ಇಂದುಶ್ರೀ: ಯಾಕೆ?

ಡಿಂಕು: ತೆನೆತೆನೆ ಅಂದ್ರೆ ಜೆಡಿಎಸ್, ಸಿಪಿಎಂ ಸಿಂಬಲ್ ಜ್ಞಾಪಕ ಬರತ್ತೆ ಅಂತ!

ಇಂದುಶ್ರೀ: ಇನ್ನೇನು ವಿಶೇಷ ಸುದ್ದಿ ಡಿಂಕು?

ಡಿಂಕು: ಇಲ್ಲಿ ಒಬ್ಬ ಭಿಕ್ಷುಕನ್ನ ಈಗತಾನೇ ಅರೆಸ್ಟ್ ಮಾಡಿದರು ಮೇಡಂ

ಇಂದುಶ್ರೀ: ಯಾಕೆ?

ಡಿಂಕು: ಅವನು ನಮೋ ವೆಂಕಟೇಶ, ನಮೋ ತಿರುಮಲೇಶ ಅಂತ ಹಾಡ್ತಿದ್ದ ಮೇಡಂ.

ಇಂದುಶ್ರೀ: ಓ! ನಮೋ ಅಂದ್ರೆ ನರೇಂದ್ರ ಮೋದಿ ಅಂತ ಅರೆಸ್ಟ್ ಮಾಡಿರಬೇಕು. ಪಾಪ!

ಡಿಂಕು: ಆದರೆ ಇವೆಲ್ಲಕ್ಕಿಂತ ಬಹಳ ತೊಂದರೆ ಆಗ್ತಿರೋದು ಪೋಲಿಂಗ್ ಬೂತಲ್ಲಿರೋ ಆಫೀಸರ್ಸ್‌ಗೆ ಮೇಡಂ

ಇಂದುಶ್ರೀ: ಏನು ತೊಂದರೆ ಡಿಂಕು?

ಡಿಂಕು: ಪೋಲಿಂಗ್ ಬೂತಲ್ಲಿ ತುಂಬಾ ಧೂಳಿದೆ ಮೇಡಂ. ಪೋಲ್ ಬೂತ್ ಆಫೀಸರ್ಗೆ ಧೂಳು ಅಲರ್ಜಿ ಅಂತೆ ಮೇಡಂ.

ಇಂದುಶ್ರೀ: ಧೂಳು ಕೊಡವಿಸಿ, ಗುಡಿಸಿ ಕ್ಲೀನ್ ಮಾಡಬಹುದಲ್ಲ!

ಡಿಂಕು: ಆಗಲ್ಲ ಮೇಡಂ. ಓಟಿಂಗ್ ಮುಗಿಯೋವರೆಗೂ ಈ ಏರಿಯಾದಲ್ಲಿ ಎಲ್ಲೂ ಪೊರಕೆ ಬಳಸೋಹಾಗಿಲ್ಲ ಮೇಡಂ. ಅದಕ್ಕೇ ಪೋಲಿಂಗ್ ಬೂತ್ ಇರೋ ರಸ್ತೆಯ ಯಾವ ಮನೆಯ ಮುಂದೇನೂ ರಂಗೋಲಿ ಹಾಕಿಲ್ಲ ಮೇಡಂ

ಇಂದುಶ್ರೀ: ರಂಗೋಲಿ ಯಾಕೆ ಹಾಕಿಲ್ಲ?

ಡಿಂಕು: ಗುಡಿಸದೆ, ನೀರು ಚಿಮುಕಿಸದೆ ರಂಗೋಲಿ ಹಾಕಕ್ಕಾಗಲ್ಲ ಮೇಡಂ. ನೀವು ಈಗಿನ ಕಾಲದವರಾದ್ದರಿಂದ ಅದು ನಿಮಗೆ ಗೊತ್ತಿರಲ್ಲ ಮೇಡಂ.

ಇಂದುಶ್ರೀ: ಒಳ್ಳೆ ಪೀಕಲಾಟ ಆಯ್ತು. ಸರಿ, ಇನ್ನೇನು ನಡೀತಿದೆ ಅಲ್ಲಿ?

ಡಿಂಕು: ಒಂದು ಗಂಡ-ಹೆಂಡತಿ ಮಾವಿನಹಣ್ಣು ಮಾರಿಕೊಂಡು ಬಂದರು ಮೇಡಂ. ಗಂಡನನ್ನು ಓಡಿಸಿಬಿಟ್ಟರು ಮೇಡಂ

ಇಂದುಶ್ರೀ: ಹೆಂಡತಿಯನ್ನು?

ಡಿಂಕು: ಓಡಿಸಲಿಲ್ಲ ಮೇಡಂ

ಇಂದುಶ್ರೀ: ಏನು ಇದರ ಹಿನ್ನೆಲೆ?

ಡಿಂಕು: ಮಾವಿನಹಣ್ಣು ಮಾರೋವ್ನು ಆಮ್ ಆದ್ಮಿ ಮೇಡಂ ಅದಕ್ಕೇ ಓಡಿಸಿಬಿಟ್ಟರು

ಇಂದುಶ್ರೀ: ಅವನ ಹೆಂಡತಿ?

ಡಿಂಕು: ಆಮ್ ಔರತ್ ಮೇಡಂ. ಆದ್ದರಿಂದ ದೋಷ ಇಲ್ಲ ಮೇಡಂ.

ಇಂದುಶ್ರೀ: ಹೌದಾ!

ಡಿಂಕು: ಮೇಡಂ, ಈಗತಾನೇ ಇಲ್ಲಿ ಒಬ್ಬ ಮೇಷ್ಟ್ರನ್ನ ಅರೆಸ್ಟ್ ಮಾಡಿದ್ರು ಮೇಡಂ

ಇಂದುಶ್ರೀ: ಯಾಕೆ?

ಡಿಂಕು: ಅವರು ಅವರ ಸ್ಟೂಡೆಂಟ್‌ನ ಎಲ್ಲರಿಗೂ ಕೇಳೋತರಹ ಕತ್ತೆ ಅಂತ ಬೈದ್ರು ಮೇಡಂ

ಇಂದುಶ್ರೀ: ಅದಕ್ಕೆ ಯಾಕೆ ಅರೆಸ್ಟ್ ಮಾಡಿದ್ರು?

ಡಿಂಕು: ಅವರು ವಾಟಾಳ್ ಪಕ್ಷವನ್ನ ವಹಿಸಿಕೊಂಡು ಮಾತನಾಡ್ತಾಯಿದ್ರು ಅಂತ ಆರೋಪದ ಮೇಲೆ ಮೇಡಂ.

ಇಂದುಶ್ರೀ: ಆದರೆ ವಾಟಾಳ್ ಪಕ್ಷದ ಸಿಂಬಲ್ ಆಟೋ ಅಲ್ವಾ?

ಡಿಂಕು: ನಿಜ ಮೇಡಂ. ಆದರೆ ಅವರು ಹೆಚ್ಚಿಗೆ ಉಪಯೋಗಿಸೋ ವೆಹಿಕಲ್ ಎಮ್ಮೆ ಮೇಡಂ. ವಾಟಾಳ್ ಅಂದ್ರೆ ಎಮ್ಮೆ, ಒಂಟೆ, ಕತ್ತೆ, ಹಂದಿ ಎಲ್ಲ ಜನರ ಮನಸ್ಸಿಗೆ ಬರೋದ್ರಿಂದ ಆ ಎಲ್ಲ ಪ್ರಾಣಿಗಳ ಚಿತ್ರ, ಹೆಸರು ಬಳಸೋದನ್ನ ನಿಷೇಧಿಸಿದ್ದಾರೆ ಮೇಡಂ

ಇಂದುಶ್ರೀ: ಇನ್ನೇನಾದರೂ ವಿಶೇಷ...

ಡಿಂಕು: ಇದೆ ಮೇಡಂ. ಇಲ್ಲಿ ಒಬ್ಬರು ಮತದಾರರು ಬಂದು ಕೇಜ್ರೀವಾಲ್ ಸಿಂಬಲ್ ಯಾವುದು ಅಂತ ಕಂಫ್ಯೂಸ್ ಆಗಿದೆ ಅಂತ ಹೇಳಿದ್ರು ಮೇಡಂ

ಇಂದುಶ್ರೀ: ಯಾಕಂತೆ ಕಂಫ್ಯೂಷನ್?

ಡಿಂಕು: ಟಿವಿಲಿ ಕೇಜ್ರೀವಾಲ್‌ನ ತೋರಿಸಿದರಂತೆ ಮೇಡಂ. ಅವರ ಕೈಲಿ ಪೊರಕೆ ಇತ್ತಂತೆ, ಕೆನ್ನೆ ಮೇಲೆ ಕೈ ಸಿಂಬಲ್ ಇತ್ತಂತೆ. ಆದ್ದರಿಂದ ಅವರ ಸಿಂಬಲ್ ಕೈಯೋ, ಪೊರಕೇನೋ ಅಂತ ಕೇಳಿದರು

ಇಂದುಶ್ರೀ: ನೀವೇನು ಹೇಳಿದಿರಿ ಡಿಂಕು

ಡಿಂಕು: ನನಗೂ ಕಂಫ್ಯೂಸ್ ಆಗ್ಹೋಯ್ತು, ಕೇಯ್ರೀವಾಲ್ ಸಿಂಬಲ್ ಮಫ್ಲರ್ ಅಂತ ಹೇಳಿಬಿಟ್ಟೆ.

ಇಂದುಶ್ರೀ: ಸಧ್ಯ! ನಿಮ್ಮನ್ನ ಪೋಲಿಂಗ್ ಆಫೀಸರ್ ಮಾಡಿಲ್ಲವಲ್ಲ; ಮಾಡಿದ್ದಿದ್ರೆ ಯಾರ ಸಿಂಬಲ್‌ನ ಯಾರಿಗೋ ಹೇಳಿ, ಮಾಡಬಾರದ್ದನ್ನ ಮಾಡಿ, ಏನು ಗಬ್ಬೆಬ್ಬಿಸ್ತಿದ್ರೋ ಏನೋ. ಡಿಂಕುರವರೆ, ಅಲ್ಲಿಗೆ ಪೋಲಿಂಗ್ ಬೂತ್ ಹತ್ತಿರ ಎಲ್ಲ ವ್ಯವಸ್ಥೆಗಳೂ ಸರಿ ಇದೆ ಅಂತಾಯ್ತು. ಥ್ಯಾಂಕ್ಸ್ ಫಾರ್ ದ ರಿಪೋರ್ಟ್ ಡಿಂಕು. ವೀಕ್ಷಕರೆ, ಮುಂದಿನ ಮನೆಹಾಳು ಸುದ್ದಿಯನ್ನು ಬ್ರೇಕಿಂಗ್ ನ್ಯೂಸ್ ಅಂತ ತರೋವರ್ಗೂ ದಿಸ್ ಈಸ್ ಇಂದುಶ್ರೀ ಸೈನಿಂಗ್ ಆಫ್ ಫ್ರಂ ಛೀಟಿವಿ ಅಲಾಂಗ್ ವಿತ್ ರಿಪೋರ್ಟರ್ ಡಿಂಕು ಎಂಡ್ ಕ್ಯಾಮರಾಮ್ಯಾನ್ ಮಂಕು. ನಿರಂತರ ತಲೆಶೂಲೆಗಾಗಿ ನೋಡುತ್ತಿರಿ ಛೀಟಿವಿ!!!▪

ಕಥಾ ಚಿಲುಮೆ

ಅನುಕೂಲ

ಲೇಖಕರು: ಕನಕಾಪುರ ನಾರಾಯಣ

ಬೆಸ್ತನೊಬ್ಬ ಪ್ರತಿದಿನವೂ ತಾನು ಹಿಡಿದ ಮೀನುಗಳನ್ನು ಒಂದು ಗಾಡಿಯಲ್ಲಿ ತುಂಬಿಕೊಂಡು ಹೋಗುತ್ತಿದ್ದ. ದಾರಿಯಲ್ಲಿ ಒಂದು ನರಿಗೆ ಅಷ್ಟೊಂದು ಮೀನುಗಳನ್ನು ನೋಡಿ ಬಾಯಿಯಲ್ಲಿ ನೀರೂರಿ ಬಂದಿತು. ಹೇಗಾದರೂ ಮಾಡಿ ಮೀನುಗಳನ್ನು ತಿನ್ನಬೇಕೆಂದು ಉಪಾಯದಿಂದ ಬೆಸ್ತ ಬರುವ ದಾರಿಯಲ್ಲಿ ಸತ್ತಂತೆ ಮಲಗಿತು, ಬೆಸ್ತನು ಇರಲಿ ಈ ಸತ್ತ ನರಿಯ ಚರ್ಮವನ್ನು ಮಾರಿ ಹಣವನ್ನು ಪಡೆಯಬಹುದು ಎಂದು ಆಲೋಚಿಸಿ ನರಿಯನ್ನು ಎತ್ತಿ ಗಾಡಿಯಲ್ಲಿ ಮೀನುಗಳಿದ್ದ ಕಡೆ ಹಾಕಿದನು. ದಾರಿಯುದ್ದಕ್ಕೂ ನರಿ ಹೊಟ್ಟೆತುಂಬುವಷ್ಟು ಮೀನುಗಳನ್ನು ಕಬಳಿಸಿತು. ಬೆಸ್ತನಿಗೆ ತಿಳಿಯದ ಹಾಗೆ ಕೆಳಕ್ಕೆ ಜಿಗಿದು ಕಾಡಿಗೆ ಓಡಿತು, ಇದನ್ನು ಕಂಡ ತೋಳವೊಂದು "ಆ ಗಾಡಿಯಲ್ಲಿ ನೀನೇನು ಮಾಡುತ್ತಿದ್ದೆ?"ಎಂದು ವಿಚಾರಿಸಲು, ನರಿ ನಡೆದದ್ದೆಲ್ಲಾ ವಿವರಿಸಿತು. ತೋಳವೂ ಥಟ್ಟನೆ ಓಡಿ ತಾನೂ ಆ ಬೆಸ್ತನ ಗಾಡಿಯ ಮುಂದೆ ಸತ್ತಂತೆ ಮಲಗಿತು.

ಬೆಸ್ತನಿಗೆ ಮತ್ತಷ್ಟು ಸಂತೋಷವಾಗಿ ಆ ತೋಳದ ಚರ್ಮವನ್ನು ಮಾರಿ ಹಣ ಮಾಡಬಹುದೆಂದು ಅದನ್ನು ಎತ್ತಲು ಹೋದನು ತೋಳವು ಭಾರವಾಗಿದ್ದ ಕಾರಣ ಒಂದು ಗೋಣಿ ಚೀಲದಲ್ಲಿ ಅದನ್ನು ತಳ್ಳಿ ಬಿಗಿಯಾಗಿ ಕಟ್ಟಿ ಗಾಡಿಯೊಳಕ್ಕೆ ಧೊಪ್ಪೆಂದು ಎಸೆದು ಮುಂದೆ ಸಾಗಿದನು. ತೋಳಕ್ಕೆ ಒಂದು ಮೀನನ್ನೂ ತಿನ್ನಲಾಗಲಿಲ್ಲ. ಮನೆಗೆ ಬಂದಾಗ ಬೆಸ್ತನು ಚೀಲವನ್ನು ಬಿಚ್ಚಿದಕೂಡಲೇ ಪ್ರಾಣ ಭೀತಿಯಿಂದ ಕಾಡಿನ ಕಡೆ ಓಡಿತು

ನೀತಿ: ಒಬ್ಬರಿಗಾದ ಅನುಕೂಲ ಮತ್ತೊಬ್ಬರಿಗೂ ಆಗದೇ ಇರಬಹುದು. ▪

ಅರಿಶಿನ ದೋಸೆ/ಮಂಜಳ್ ದೋಸೆ (ಉಡುಪಿ ಶೈಲಿ)

ಬೇಕಾಗುವ ಸಾಮಗ್ರಿಗಳು

- ಅಕ್ಕಿ ಮೂರು ಲೋಟ
- ಉದ್ದು ಒಂದು ಲೋಟ
- ಮೆಂತ್ಯ ಉಪ್ಪು ಒಂದೊಂದು ಚಮಚ
- ಹಸಿ ಅರಿಸಿನ ಎರಡು ತುಂಡು

ಮಾಡುವ ವಿಧಾನ

- ಅಕ್ಕಿ,ಅರಿಸಿನ,ಮೆಂತ್ಯ ಜೊತೆಯಾಗಿ ನೆನೆಸಿ ನುಣ್ಣಗೆ ರುಬ್ಬಿ
- ಉದ್ದನ್ನು ಪ್ರತ್ಯೇಕ ನೀರಿನಲ್ಲಿ ಮೂರು ಘಂಟೆ ನೆನೆಸಿ
- ಉದ್ದನ್ನು ತೊಳೆದು ನುಣ್ಣಗೆ ನೀರಿಲ್ಲದೇ ರುಬ್ಬಿ
- ಎರಡನ್ನೂ ಉಪ್ಪು ಹಾಕಿ ಆರೇಳು ಘಂಟೆ ಹುದುಗಲು ಬಿಡಿ
- ಕಾದ ಕಾವಲಿಗೆ ಎಣ್ಣೆ ಸವರಿ ದೋಸೆ ಹುಯ್ಯಿರಿ
- ಮೂಲಂಗಿ ಅಥವಾ ಪುದೀನಾ ಚಟ್ನಿ ಜೊತೆಗೆ ತಿನ್ನಲು ಚೆನ್ನ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಅರ್ಧ ಏರಿದಾಗ ಅಳು ಪೂರ್ತಿ ಏರಿದಾಗ ನಗು ಯಾವಾಗ?

೨. ಕುಂತಲ್ಲೆ ಸುತ್ತುತ್ತೇನೆ, ಲೋಕವನ್ನೇ ಎಚ್ಚರಿಸುತ್ತೇನೆ

ಉತ್ತರಕ್ಕೆ ಪುಟ ೧೧ ನೋಡಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಭವದ ಮೋಹ – ನಮ್ಮ ದಾಹ

ಏಕೆ ಅರಸುವೆ ಏಕೆ ಅರಸುವೆ
ಸುಖದ ಸ್ವರ್ಗ ಲೋಕ
ನೆರಳಿನಂತೆ ಹಿಂಬಾಲಿಸಿ ಬರುತಿದೆ
ಸುಖದ ಹಿಂದೆ ಶೋಕ...

ಹಿಡಿಯನ್ನ ಉದರಕೆ ಸಾಕೆಂದೇ
ಅಂದು ನೋವಿನಲ್ಲಿ ನೀನು...
ಕಾಮಿನಿಯು ಮತ್ತು ಕನಕ
ಬೇಕೆಂದೆ ಮತ್ತೆ ನೀನು...

ನೆಲೆಗೊಂದು ಸಾಕೆಂದೆ
ಒಂದು ಸಣ್ಣ ಸೂರು...
ಅದಕ್ಕಿಂತ ಚೆನ್ನಿಹುದು ಬೇಕೆಂದೇ
ಇನ್ನೂ ಹತ್ತು ನೂರು...

ಮಕ್ಕಳ ಮದುವೆಯ ಔತಣಕ್ಕಿದ್ದರೆ
ಸಾಕೆಂದು ಜಪಿಸುತ್ತಿದ್ದೆ
ಪರಿತಪಿಸಿದ್ದೆ ಮೊಮ್ಮಕ್ಕಳು
ತೊಡೆಯಮೇಲೆ ಮಾಡಲೆಂದು ನಿದ್ದೆ...

ಮಣ್ಣಿಗಂಟಿದ ಮೋಹವಿದೆಲ್ಲಾ
ತಿಳಿಯೊ ಜೀವನದ ತಿರುಳಾ...
ಕಣ್ಣಿಗಂಟಿದಾ ಪೊರೆಯ ಕಳಚಿ
ಕರೆಯೊಮ್ಮೆ ದೇವನಿಗೆ ಮರುಳಾ... ▪

ರಚನೆ: ಮಾಲು (ಅಡಿಲೈಡ್)

ಹಾಸ್ಯ ಚಿಲುಮೆ

ಸಂಟಾ ತನ್ನ ಗೆಳತಿಗೆ ಪತ್ರ ಬರೆಯುತ್ತಿದ್ದ, ಅದನ್ನು ನೋಡಿದ ಬಂಟಾ ಕೇಳಿದ
"ಏನೋ ಲೆಟರ್ ಖಾಲಿ ಇದೆ,ಯಾಕೆ ಏನೂ ಬರೆದಿಲ್ಲಾ?"
ಅದಕ್ಕೆ ಸಂಟಾ ಹೇಳಿದ " ಈ ನಡುವೆ ನಾವು ಮಾತಾಡೋದು ನಿಲ್ಲಿಸಿದ್ದೇವೆ"

ಟೀಚರ್: ಗುಂಡಾ ನೀರು ಮತ್ತು ನೆಲದಮೇಲೆ ಎರಡೂ ಕಡೆ ಬದುಕಬಲ್ಲ ಪ್ರಾಣಿ ಯಾವುದು?
ಗುಂಡ: ಕಪ್ಪೆ ಸಾರ್
ಟೀಚರ್: ಗುಡ್, ಇನ್ನೂ ಎರಡು ಉದಾಹರಣೆ ಕೊಡು
ಗುಂಡ: ಕಪ್ಪೆಯ ಅಪ್ಪ ಮತ್ತು ಅದರ ಅಮ್ಮ ಸಾರ್

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ೮೦ ರ ದಶಕದಲ್ಲಿ ಕನ್ನಡ ಬಾಷೆಯ ಪರವಾಗಿ ಸಲ್ಲಿಸಿದ ಗೋಕಾಕ್ ವರದಿಯ ಖ್ಯಾತಿಯ ಶ್ರೀ ಗೋಕಾಕ ರ ಸಂಪೂರ್ಣ ಹೆಸರೇನು? ಇವರ ಯಾವ ಕೃತಿಗಾಗಿ ಇವರಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿತು?

೨. 'ಇಂದಿರಾಬಾಯಿ' ಈ ಕಾದಂಬರಿಯ ಹೆಗ್ಗಳಿಕೆ ಏನು? ಇದರ ಲೇಖಕರು ಯಾರು?

ಸರಿ ಉತ್ತರಕ್ಕೆ ಪುಟ ೧೬ ನೋಡಿ

ಇದೇನ್ಲಾ ಇದು – ಉತ್ತರ

೧. ಬಳೆ ತೊಡುವಾಗ
೨. ಗಡಿಯಾರ

ಕರುನಾಡು – ಕಾಂಗರುನಾಡು

ಲೇಖಕರು: ನಾಗೇಂದ್ರ ಅನಂತಮೂರ್ತಿ

ಕರ್ನಾಟಕ ಎಂದರೆ ಶ್ರೀಗಂಧದ ಬಗ್ಗೆ ಹೇಳದಿದ್ದರೆ ಹೇಗೆ? ಬಹಳ ಹಿಂದಿನಿಂದ, ಕರ್ನಾಟಕ (ಕರುನಾಡು) ಎಂದರೆ ಶ್ರೀಗಂಧದ ತವರೂರೆಂದೇ ಪ್ರಖ್ಯಾತಿ. ಅಲ್ಲದೆ ಕನ್ನಡಿಗರಿಗೆ ಹೆಮ್ಮೆಯ ಹಾಗು ಹಿರಿಮೆಯ ವಿಷಯವೂ ಹೌದು. ಕಾರಣ ಸ್ಯಾಂಟಲಮ್ ಆಲ್ಬಮ್ (Santalum album), ಅಥವಾ ಭಾರತೀಯ ಶ್ರೀಗಂಧ (Indian sandalwood) ಎಂಬ ಶ್ರೀಗಂಧದ ತಳಿಯ ಉತ್ಪಾದನೆ ಉನ್ನತ ಗುಣಮಟ್ಟದ್ದು ಮತ್ತು ಅತಿ ಹೆಚ್ಚು ಪ್ರಾಮಣದಲ್ಲಿ ಕರ್ನಾಟಕದದಿಂದಲೇ ಹೊರದೇಶಗಳಿಗೆ ರಫ್ತಾಗುವುದು. ರಾಜ್ಯದ ಪಶ್ಚಿಮ ಘಟ್ಟಗಳಲ್ಲಿ ಹಾಗೂ ಮೈಸೂರು ವಿಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುವುದು. ಇದು ಕರ್ನಾಟಕದ ಒಂದು ಹೆಮ್ಮೆಯ ವಿಷಯ.

ಆಸ್ಟ್ರೇಲಿಯಾದಲ್ಲಿ ಕನ್ನಡಿಗರೆಲ್ಲಾ ನೆಲೆಸಿರುವ ಕಾರಣವೋ ಏನೋ ಕಾಂಗರುನಾಡು, ಕರುನಾಡನ್ನು ಹಿಂದಿಕ್ಕಿ ಶ್ರೀಗಂಧದ ಉತ್ಪಾದನೆಯಲ್ಲಿ ಮುಂದೆ ಸಾಗಲಿದೆ. ಅಲ್ಲದೆ ೨೦೧೮ ರ ವೇಳೆಗೆ ವಿಶ್ವದಲ್ಲೇ ಮೊದಲ ಸ್ಥಾನಕ್ಕೇರಲಿದೆ ಎಂದು ಅಂದಾಜು ಮಾಡಲಾಗಿದೆ. ಅದೂ ಸಹ ಭಾರತೀಯ ಶ್ರೀಗಂಧದ ಉತ್ಪಾದನೆಯಲ್ಲಿ.

ಅಂದ ಹಾಗೆ, ಆಸ್ಟ್ರೇಲಿಯಾ ಶ್ರೀಗಂಧ (Australian sandlewood) or ಸ್ಯಾಂಟಲಮ್ ಸ್ಪಿಕಟಂ (Santalum spicatum) ಹೆಚ್ಚಾಗಿ ಬೆಳೆಯುವುದು ಪಶ್ಚಿಮ ಆಸ್ಟ್ರೇಲಿಯಾ (western Australia)ದ ಪರ್ಥ್ ಬಳಿ. ಭಾರತೀಯ ಶ್ರೀಗಂಧವನ್ನೂ ಸಹ ಬೆಳೆಯುವುದು ಪಶ್ಚಿಮ ಆಸ್ಟ್ರೇಲಿಯಾದ ಕುನುನುರ್ರದಲ್ಲಿ (Kununurra).

ಸ್ವಲ್ಪ ರಾಜಕೀಯಕ್ಕೆ ಬರೋಣ, ಹೋಲಿಕೆಗಾಗಿ ಮಾತ್ರ ಕರ್ನಾಟಕದ ಭಾ ಜ ಪ (B J P) ವನ್ನು ಆಸ್ಟ್ರೇಲಿಯಾ ದ ಲೇಬರ್ (Labour) ಪಾರ್ಟಿಗೆ ಹಾಗು ಕಾಂಗ್ರೆಸ್ ಮತ್ತು ಲಿಬರಲ್ ಪಕ್ಷಗಳನ್ನು ಹೋಲಿಸೋಣ.



ಕುಮಾರಣ್ಣನವರ ಜೊತೆ ಸೇರಿ ಬಿಜೆಪಿ ಅಧಿಕಾರ ನಡೆಸಿದಂತೆ ಇಲ್ಲಿ ಲೇಬರ್ ಕೆಲವು ಸ್ವತಂತ್ರರ ಜೊತೆ ಸೇರಿ ಸರ್ಕಾರ ನಡೆಸಿತು ಆದರೆ ಆಡಳಿತದ ಸಮಯ ಸ್ವಲ್ಪ ಹಿಂದುಮುಂದಾಗಿತ್ತು.

ವಿರೋಧ ಪಕ್ಷದಲ್ಲಿ ಮಾಲ್ಕಂ ಟರ್ನ್ಬುಲ್ ರನ್ನು ಹಿಂದಿಕ್ಕಿ ಟೋನಿ ಅಬೊಟ್ ನಾಯಕರಾದಂತೆ ಮುಂಚೂಣಿಯಲ್ಲಿದ್ದ ಮೂಲ ಕಾಂಗ್ರೆಸ್ ನಾಯಕರನ್ನು ಹಿಂದಿಕ್ಕಿ ನಮ್ಮ ಸಿದ್ರಾಮಣ್ಣ ನಾಯಕರಾದರು.

ಅಲ್ಲದೆ ಬಿಜೆಪಿ ಸ್ವತಂತ್ರವಾಗಿ ಸರ್ಕಾರ ನಡೆಸಿದಂತೆ ಇಲ್ಲಿ ಲೇಬರ್ ಕೂಡ ಸ್ವಂತ ಬಲದಲ್ಲಿ ಸರ್ಕಾರ ನಡೆಸಿತು. ಇಲ್ಲಿ ನಮ್ಮ ಯಡ್ಡಿಯವರಿಗೂ ಹಾಗೂ ಕೆವಿನ್ ರಡ್ ಗೂ ಹೋಲಿಕೆ ನೋಡಿ: ಈ ನಾಯಕರೇ ಯಶಸ್ಸಿನ ಕಾರಣಕರ್ತರಾದರು ಆದರೆ ಕೊನೆಗೆ ಇಬ್ಬರೂ ದುರಂತ ನಾಯಕರಾಗಿ ಅಧಿಕಾರದಿಂದ ಕೆಳಗಿಳಿದರು. ಮತ್ತೆ ಅದಿಕಾರ ಸಿಗಲ್ಲ ಎಂದಾದಾಗ (ಸಿಕ್ಕದಿದ್ದಾಗ) ಇಬ್ಬರೂ ಮುಂಚೂಣಿಯಲ್ಲಿ ಬಂದರು. ಇಲ್ಲಿ ರಡ್ ರ ಕಥೆ ಮುಗಿದರೂ ನಮ್ಮ ರಾಜಕೀಯ ಬೇರೆ ಬಿಡಿ. ಕೊನೆಗೆ ಅಲ್ಲಿ ಕಾಂಗ್ರೆಸ್ ಇಲ್ಲಿ ಲಿಬರಲ್ ಸರ್ಕಾರ ಬಂದಿದೆ.

ಕರ್ನಾಟಕದ ಹೊರತಾಗಿ ಸ್ವಲ್ಪ ನೋಡಿದರೆ ಭಾರತದಲ್ಲೊಂದು ಹೊಸ ಪಕ್ಷ ಉದಯವಾಯಿತು ಆಮ್ ಅದ್ಮಿಯ ರೂಪದಲ್ಲಿ, ಕೇಜ್ರಿಯ ಕೃಪೆಯಿಂದ. ಇಲ್ಲೂ ಸಹ ಆಮ್ ಅಲ್ಲದ ಆದ್ಮಿ (ಕೋಟ್ಯಾಧಿಪತಿ) ಕ್ಲೈವ್ ಪಾಮರ್ ಕೃಪೆಯಿಂದ ಪಾಮರ್ ಯುನೈಟೆಡ್ ರೂಪದಲ್ಲಿ ಹೊಸ ಪಕ್ಷವೊಂದು ಬಂತು. ಆಮ್ ಆದ್ಮಿಯಂತೆ ಪಾಮರ್ ಯುನೈಟೆಡ್ ಕೂಡ ಆರಂಭಿಕ ಯಶಸ್ಸು ಕಂಡಿತು. ಅಲ್ಲಿ ಅಧಿಕಾರ ಹೋಯಿತು. ಇಲ್ಲಿ, ಸಿಕ್ಕ ಕೆಲವು ಸೆನೆಟ್ ಸೀಟುಗಳು ಮಿಸ್ಸಿಂಗ್ ಮತಗಳ ಕಾರಣ ಇಲ್ಲವಾಗಿ ಮರುಮತದಾನವಾಯಿತು. ಅಲ್ಲಿ ನಮ್ಮ ಕೆಜ್ರಿ ಮರು ಚುನಾವಣೆಗೆ ರಾಜ್ಯಪಾಲರ ಹಿಂದೆ ಬಿದ್ದಿದ್ದಾರೆ.

ಇದು ಒಂದು ರೀತಿ ಟೈಮ್ ಪಾಸ್ ವಿಶ್ಲೇಷಣೆ ಅಷ್ಟೇ. ಇನ್ನೂ ಹಲವು ಸಾಮ್ಯತೆಗಳು ಹಾಗು ವಿಶೇಷತೆಗಳು ಇರಬಹುದು. ಹೀಗೆ ತಾಳೆ ಹಾಕುತ್ತಾ ಹೋಗುವುದು ಒಂದು ರೀತಿಯ ಮನರಂಜನೆಯೇ ಸರಿ. ಅಲ್ಲವೇ? ▪

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

1. ಯಶವಂತ ಚಿತ್ತಾಲರು ತೋರಿದ ಮಾರ್ಗಗಳು ಒಂದೆರಡಲ್ಲ, ನಂತರದ್ದು.

	ರು		ರಿ		

2. ಸಿರಿದೇವಿಯು ನವನೀತದಂತೆ ಬರಲು, ದಾಸರ ಪ್ರಕಾರ ಬೇಕಾದ ತಂಪು ಪಾನೀಯ?

ಮ		

3. ಹಿಂದಿಂದಾದರೂ ಸರಿ, ಮುಂದಿಂದಾದರೂ ಸರಿ, ರಾಮಕೃಷ್ಣ ಹಾಸ್ಯ ಕವಿಯೇ.

ವಿ		ಟ		

4. ಕಾದಂಬರಿಯಾಧಾರಿತ ತರಹ ತರಹದ ಚಲನಚಿತ್ರಗಳಲ್ಲಿ ಅತಿ ಹೆಚ್ಚು ಈ ಖ್ಯಾತ ಲೇಖಕರದು.

	ರಾ	

5. ಬನವಾಸಿಯನ್ನು ನೆನೆವ ಕವಿಯ ಈ ಮಹಾಕಾವ್ಯಕ್ಕೆ ಮಧ್ಯಮ ಪಾಂಡವನೇ ನಾಯಕ.

ವಿ	ಕ್ರ		ರ್ಜು			ಜ	

ಮೇಲಿನ ಆಯ್ದ ಅಕ್ಷರಗಳನ್ನು ಸೇರಿಸಿ ಕೆಳಗಿನ ನಿಗೂಢ ಪದ ಹುಡುಕಿ

ಅಜ್ಜಿ ನಿದ್ದೆಯಲಿ ಕಂಡುದನ್ನು ಬರೆದು ಕನ್ನಡದ ಅಜ್ಜ ಪ್ರಶಸ್ತಿ ಪಡೆದರು.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಮೇ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಏಪ್ರಿಲ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ಎಲ್ಲಾ ಸರಿ ಉತ್ತರ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮ ಅಶೋಕ್, ಸಿಡ್ನಿ
- ಬಿ.ಆರ್. ವತ್ಸಲ ದ್ವಾರಕನಾಥ್ , ಕೆ.ಜಿ.ಎಫ್
- ಗೀತ ಪ್ರಸಾದ್, ಅಡಿಲೇಡ್
- ಶ್ರೀಧರ್ ಬಾಣಸಂದ್ರ, ಕ್ಯಾನ್ಬೆರ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಪುಷ್ಪ ಜಗದೀಶ್, ಸಿಡ್ನಿ
- ಆಶಾ ಫಣಿರಾಜ್, ಬೆಂಗಳೂರು
- ಹರಿಣಿ ರಾವ್, ನವದೆಹಲಿ
- ರಾಜೇಶ್ವರಿ, ಸಿಡ್ನಿ
- ಅನು ಶಿವರಾಂ, ಸಿಡ್ನಿ
- ನವ್ಯ. ಪಿ, ಬೆಂಗಳೂರು
- ಜಯಶ್ರೀ ನಾಗರಾಜ, ಕ್ಯಾನ್ಬೆರ
- ಚಂದ್ರಿಕಾ ಉದಯ್, ಸಿಡ್ನಿ
- ಗಣೇಶ್ ಕುಮಾರ್, ಬೆಂಗಳೂರು

ಏಪ್ರಿಲ್ ತಿಂಗಳ ಪದಪುಂಜದ ಉತ್ತರ

ಕೆಳಕಂಡ ಐದು ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

1. ಕೆರೆಯ ದಂಡೆಗೂ, ಮೇಲೆ ಹತ್ತುವುದಕ್ಕೂ ಒಂದೇ ಪದ

ಏ	ರಿ

2. ದೇಶ ಭಾಷೆಗಳ ಮೇಲೆ ತಿಂಚಿತ್ತಾದರೂ ಬೇಡವೆ?

ಅ	ಭಿ	ಮಾ	ನ

3. ಮದರಿ ಮುನಿಸಿಕೊಂಡಾಗ ಅಡುಗೆ ಮನೆಯಲ್ಲಿ ಕುಕ್ಕಿಸಿಕೊಂಡದ್ದು.

ಪಾ	ತ್ರೆ

4. ಮಾಡಲು ಸುಲಭವಾದ, ಎಲ್ಲರಿಗೂ ಪ್ರಿಯವಾದ ಈ ತಿನಿಸನ್ನು ಮಾಡಲು ನೀವೇನೂ ಕಲಾವಿದರಾಗಬೇಕಾಗಿಲ್ಲ.

ಚಿ	ತ್ರಾ	ನ್ನ

5. ಛೇ, ಅವನು ಮಾಯಗಾರನೇನಲ್ಲ, ಪಾಪ ಮುಗ್ಧನಷ್ಟೆ.

ಅ	ಮಾ	ಯ	ಕ

ಮೇಲಿನ ಆಯ್ದ ಅಕ್ಷರಗಳನ್ನು ಸೇರಿಸಿ ಕೆಳಗಿನ ನಿಗೂಢ ಪದ ಹುಡುಕಿ

ಬಂಟಿಯಾಗಿ ನಟಿಸಿ, ಪ್ರದರ್ಶನ ನೀಡಬಲ್ಲಿರೇನು?

ಏ	ಕ	ಪಾ	ತ್ರಾ	ಭಿ	ನ	ಯ

NRI SEVA
Educational, Legal, financial, Health, Reality management services
Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ರಚನೆ: ಪುಷ್ಪ ವೆಂಕಟೇಶ್

ನಾಗಶೈಲ ಕುಮಾರ್ ಭಾರತದಲ್ಲಿ ಕೈಗೊಂಡಿದ್ದ "ಸೈಕಲ್ ಪಯಣ" ದ ಅನುಭವ ಲೇಖನದ ಮುಂದಿನ ಕಂತು ...

ಗೋಡೆಯ ಮೇಲಿನ ಹಲ್ಲಿಗಳು: ಮಾರನೆಯ ದಿನ ಚಾಲೀಸ್ ಗಾಂವ್ ನಿಂದ ಔರಂಗಾಬಾದ್ ಗೆ ನಮ್ಮ ಪ್ರಯಾಣ. ಸಮತಟ್ಟಾದ ರಸ್ತೆ, ಒಳ್ಳೆಯ ಹವೆ, ಓ ಪರವಾಗಿಲ್ಲ ಇವತ್ತು ಒಳ್ಳೆಯ ಆರಂಭವೇ ಆಗಿದೆ ಎಂದುಕೊಂಡು ಸಾಗುತ್ತಿದ್ದೆವು. ಸ್ವಲ್ಪ ದೂರ ಹೋದಮೇಲೆ ಬೆಟ್ಟವೊಂದು ಎದುರಿಗೆ ಕಾಣತೊಡಗಿತು. ಅದು ನಮ್ಮ ಪ್ರಯಾಣದಲ್ಲಿ ಮಾಮೂಲೇ, ಎಲ್ಲೋ ಬದಿಯಲ್ಲಿ ಸಾಗಿಹೋಗುತ್ತೇವೆ ಎಂದುಕೊಂಡು ಅದನ್ನೇ ನೋಡುತ್ತಾ ಮುಂದೆ ಮುಂದೆ ಸಾಗುತ್ತಿದ್ದಂತೆ, ನಮ್ಮೆದುರಿಗೆ ಬೃಹತ್ತಾದ ಅಡ್ಡ ಗೋಡೆಯಂತೆ ಕಾಣತೊಡಗಿತು. ಇನ್ನೂ ಮುಂದೆ ಹೋದಂತೆ ಅದರ ಮೇಲೆ ರಸ್ತೆಗಳು ಗೋಡೆಗೆ ಅಂಟಿಸಿದಂತೆ ಕಾಣುತ್ತಾ. ಆ ರಸ್ತೆಯಲ್ಲಿ ಮೇಲೆ ಹತ್ತುತ್ತಿದ ಲಾರಿಗಳು ತೆವಳುತ್ತಿರುವ ಹಲ್ಲಿಗಳಂತಿದ್ದವು. ನಾನೂ ನಮ್ಮಣ್ಣ ಮುಖಮುಖ ನೋಡಿಕೊಂಡೆವು. ಮೊದಲಿಗೆ ಹೇಗೆ ಹತ್ತುವುದು ಆ ಗೋಡೆಯನ್ನು ಎಂದುಕೊಂಡೆವು, ನಂತರ ನೋಡೆಬಿಡೋಣ ಬಾ, ಇದೂ ಒಂದು ಸವಾಲೇ, ಎಂದುಕೊಂಡು ಆ ತಡೆಗೋಡೆಯ ಕಡೆಗೆ ಯುದ್ಧಕ್ಕೆ ಸಿದ್ಧರಾದವರಂತೆ ಮುನ್ನಡೆದೆವು.

ರಸ್ತೆ ನಮ್ಮ ಅದೃಷ್ಟಕ್ಕೆ ಉತ್ತಮ ಸ್ಥಿತಿಯಲ್ಲಿಯೇ ಇತ್ತು. ಯಾವುದೇ ಆತುರ ಪಡದೆ ನಿಧಾನವಾಗಿ ಏರಲಾರಂಭಿಸಿದೆವು. ಬೆಟ್ಟವೇನೂ ಅಂತಹ ಎತ್ತರವಿಲ್ಲದಿದ್ದರೂ, ಒಂದೇ ಸಮನಾಗಿ ಏರು ಹಾದಿಯಾದ್ದರಿಂದ ಹತ್ತುವುದು ಕಷ್ಟವೇ ಇತ್ತು. ದೊಡ್ಡ ದೊಡ್ಡ ಲಾರಿಗಳೇ ಏದುಸಿರು ಬಿಟ್ಟುಕೊಂಡು ಇದ್ದ ಬದ್ದ ಗೇರ್ ಗಳನ್ನೆಲ್ಲಾ ಬದಲಾಯಿಸಿಕೊಂಡು ಕಷ್ಟಪಡುತ್ತಿದ್ದವು. ನಾವು ಏನೇ ಆಗಲಿ ಸೈಕಲ್ ನಿಂದ ಕೆಳಗೆ ಇಳಿಯಬಾರದೆಂದು ತೀರ್ಮಾನಿಸಿ ಮುಂದೆ ಸಾಗುತ್ತಿದ್ದೆವು. ಬೆಳಗ್ಗೆ ಚೆನ್ನಾಗಿ ತಿಂಡಿ ತಿಂದದ್ದು ಉಪಯೋಗವಾಗುತ್ತಿತ್ತು. ನಿಧಾನವಾಗಿ ನಮಗೇ ಒಂದು ಹೊಸ ಹುರುಪು ಮೂಡತೊಡಗಿತ್ತು. ಅನೇಕ ಲಾರಿಗಳವರು ನಮ್ಮ ಲಾರಿ ಹಿಡಿದುಕೊಂಡು ಬನ್ನಿ ಎಂದರೂ ನಿರಾಕರಿಸಿ, ಅವರಿಗೆ ಧನ್ಯವಾದ ಸಲ್ಲಿಸಿ ಮುಂದೆ ಸಾಗಿದೆವು. ಮತ್ತೆ ಕೆಲವು ಲಾರಿಗಳಿಗೆ ನಮ್ಮನ್ನು ಹಿಂದೆ ಹಾಕಿ ಮುಂದೆ ಹೋಗಲೂ ಸಾಧ್ಯವಾಗಲಿಲ್ಲ. ಮೇಲೆ ಮೇಲೆ ಹೊದಂತೆಲ್ಲಾ ಮುಂದೆ ಕಾಣುತ್ತಿದ್ದ ರಮಣೀಯ ಪ್ರಕೃತಿ ಸೌಂದರ್ಯ, ನಮಗೆ ವರವಾಗಿ ದೊರೆತಿದ್ದ ತಂಗಾಳಿ, ನಮ್ಮನ್ನು ಯಶಸ್ವಿಯಾಗಿ ಆ ಘಟ್ಟವನ್ನು ಯಶಸ್ವಿಯಾಗಿ ಮೇಲೇರಲು ಸಹಾಯ ನೀಡುತ್ತಿತ್ತು. ಕಡೆಯ ತಿರುವನ್ನು ಮುಗಿಸಿ ಇನ್ನೇನು ಮುಗಿಯುತ್ತಿದೆ ಎನ್ನುವಾಗ ಅನಿರೀಕ್ಷಿತವಾಗಿ ಕುರಿಗಳ ಹಿಂಡೊಂದು ಅಡ್ಡಬಂದು ಬಿಟ್ಟಿತು. ಮೊದಲೇ ಗೊತ್ತಲ್ಲ, ಒಂದು ಕುರಿ ಅಡ್ಡ ಬಂದರೆ..... . ಆದರೂ ನಮ್ಮಣ್ಣ ಛಲ ಬಿಡದೆ ಜೋರಾಗಿ ಬೆಲ್ ಹೊಡೆಯುತ್ತಾ ಕೆಳಗಿಳಿಯದೇನೇ, ಆ ಕುರಿಗಳ ನಡುವೆಯೇ ನುಗ್ಗಿಸಿದ, ನಾನು ಅವನನ್ನು ಹಿಂಬಾಲಿಸಿ, ಅಂತೂ ಇಂತೂ ಕುರಿಮಂದೆಯಿಂದ ಹೊರ ಬಂದೆವು. ಗೋಡೆಯಂತಿದ್ದ ಘಟ್ಟವನ್ನು ಸಂಪೂರ್ಣವಾಗಿ ಹತ್ತಿ, ಮೇಲೆ ಬಂದು, ನಾವು ಬಂದ ಹಾದಿಯನ್ನು ಹಿಂದಿರುಗಿ ನೋಡಿದಾಗ, ಹೆಮ್ಮೆಯಿಂದ, ಉತ್ಸಾಹದಿಂದ ಹೋ! ಎಂದು ಕೂಗಿ ಸಂಭ್ರಮಿಸಿದೆ.

ನಾವು ಕಷ್ಟಪಟ್ಟು ಕ್ರಮಿಸಿದ ಆ ಘಟ್ಟದ ಹೆಸರೇನು ಗೊತ್ತೆ? "ಕನ್ನಡ್ ಘಾಟ್"

ಕಾಳೀಮಠಕ್ಕೆ ಭೇಟಿ: ಮುಂದೆ ಸಿಕ್ಕ ಊರೂ ಕೂಡ ಕನ್ನಡ್. ಮನಸ್ಸಿನಲ್ಲಿ ಕುತೂಹಲ ಕನ್ನಡ್ ಗೂ ಕನ್ನಡಕ್ಕೂ ಏನಾದರೂ ಸಂಬಂಧ ಇರಬಹುದೇ ಎಂದು, ಹಾಗೂ ಮತ್ತೊಂದೆಡೆ ಸಂತೋಷ ಮಹಾರಷ್ಟ್ರದಲ್ಲಿ ನಮ್ಮ ಭಾಷೆಯ ಹೆಸರಿನ ತಾಲೂಕೇ ಇದೆಯಲ್ಲ ಎಂದು. ಮಹಾರಾಷ್ಟ್ರದಲ್ಲಿ ಸುಮಾರು ವಿದ್ಯಾಸಂಸ್ಥೆಗೆ, ಪ್ರಕೃತಿಗೆ ಹೆಸರುವಾಸಿಯಾದ ಸ್ಥಳ . ಆದರೆ ಎಲ್ಲೂ ಕನ್ನಡ ಕಾಣಿಸಲೂ ಇಲ್ಲ, ಕೇಳಿಸಲೂ ಇಲ್ಲ. ಅಲ್ಲಿ ಮತ್ತೊಮ್ಮೆ ತಿಂಡಿ ತಿಂದು ಚೆನ್ನಾಗಿ ಕಬ್ಬಿನ ಹಾಲು ಕುಡಿದು ಮುಂದೆ ಹೊರಟೆವು. ಮತ್ತೆ ಮುಂದೆ ಹೋದರೆ ಒಂದು ಕಾಳಿಮಠ ಮತ್ತು ಮಂದಿರವಿರುವುದು ತಿಳಿಯಿತು. ಮಧ್ಯಾಹ್ನ ಪೂಜೆಗಳೆಲ್ಲಾ ಮುಗಿದಿರುವ ಸಮಯ, ಆದರೂ ಹೋದೆವು. ಸ್ವಾಮಿಗಳು ಭಕ್ತರ ಕುಶಲೋಪರಿ ವಿಚಾರಿಸುವುದರಲ್ಲಿ ನಿರತರಾಗಿದ್ದರು. ನಮ್ಮನ್ನು ಕಂಡು ಮುಗುಳ್ನಗೆಯಿಂದಲೇ ಕುಳಿತುಕೊಳ್ಳುವಂತೆ ಸನ್ನೆಮಾಡಿದರು. ನಮಗೇಕೋ ಅಲ್ಲಿನ ಅಪರಿಚಿತ ವಾತಾವರಣ, ನಮ್ಮ ಕಲ್ಪನೆಗೆ ತಕ್ಕಂತಿರದ ಸ್ವಾಮೀಜಿ (ಇದು 25 ವರ್ಷಗಳ ಹಿಂದೆ, ಸ್ವಾಮೀಜಿಯೆಂದರೆ, ಕೃಶಕಾಯರು, ತುಂಬು ಗಡ್ಡ, ಸುಮಾರು ವೃದ್ಧರು, ಹೀಗೆಲ್ಲಾ ನಮ್ಮ ಕಲ್ಪನೆ) ಯಾಕಾದರೂ ಇಲ್ಲಿಗೆ ಬಂದೆವೋ ಎನ್ನಿಸಿತು.

ಮುಂದಿನ ಪುಟ ನೋಡಿ ...

ಸ್ವಾಮೀಜಿ ನಮ್ಮ ಬಗ್ಗೆ ವಿವರಗಳನ್ನು ಕೇಳಿದರು, ನಮಗೆ ತಿಳಿದ ಹರಕು ಮುರುಕು ಹಿಂದಿಯಲ್ಲಿಯೇ ಎಲ್ಲಾ ವಿವರಿಸಿದೆವು. ಬಲು ಸಂತೋಷ ಪಟ್ಟು, ನಮ್ಮ ಕೈಗೆ ಹಣ್ಣುಗಳನ್ನಿತ್ತು ಆಶೀರ್ವದಿಸಿದರು. ಊಟವಾಯಿತೆ ಎಂದು ವಿಚಾರಿಸಿದರು. ಇಲ್ಲ ಈಗ ಹೊರಗೆ ಹೋಗಿ ಮಾಡುತ್ತೇವೆ ಎಂದು ಹೇಳಿ, ಅವರಿಗೆ ನಮಸ್ಕರಿಸಿ ಅಲ್ಲಿಂದ ಹೊರಬಂದೆವು. ನಮ್ಮನ್ನು ಹಿಂಬಾಲಿಸಿಕೊಂಡು ಸಾಮೀಜಿಯ ಶಿಷ್ಯನಂತಿದ್ದ ವ್ಯಕ್ತಿಯೊಬ್ಬ ನಮ್ಮ ಹಿಂದೆಯೇ ಬಂದು, ನಾವು ಎಲ್ಲಿ ಹೋದರಲ್ಲಿ ನಮ್ಮನ್ನು ಹಿಂಬಾಲಿಸಲಾರಂಬಿಸಿದ. ಮಠದ ಎದುರಿಗೇ ಸಾಲು ಸಾಲು ಅಂಗಡಿಗಳು ಮತ್ತು ಒಂದು ದೊಡ್ಡ ಹೋಟೆಲ್ ಕೂಡ ಇತ್ತು. ನಾವು ಹೋಟೆಲ್ ನ ಒಳಹೊಕ್ಕು ತಿಂಡಿ ತೆಗೆದುಕೊಳ್ಳೋಣವೆಂದು ಕುಳಿತರೆ, ಆ ವ್ಯಕ್ತಿ ನಮ್ಮ ಬಳಿಯೇ ಒಂದು ಕುರ್ಚಿ ಹಾಕಿಕೊಂಡು ಕುಳಿತ. ನಮಗೆ ಯಾಕಿರಬಹುದು ಎಂಬ ಕುತೂಹಲ. ನಾವು ಮಾಣಿಯನ್ನು ಕರೆದು ಏನಿದೆ ತಿಂಡಿ ಎಂದು ವಿಚಾರಿಸಿ, ನನಗೆ ಇಷ್ಟವಾದ ಪೂರಿಸಾಗು ತರಲು ಹೇಳಿದ ಮೇಲೆ, ಆ ವ್ಯಕ್ತಿ ಹೇಳಿದ ಇಲ್ಲಿ ನೀವು ಏನು ಬೇಕಾದರೂ ತಿನ್ನಿ, ಎಷ್ಟು ಬೇಕಾದರೂ ತಿನ್ನಿ, ಹಣವೇನೂ ಕೊಡಬೇಕಾಗಿಲ್ಲ ಎಂದ, ನಾವು ಆಶ್ಚರ್ಯದಿಂದ ಏಕೆ ಎಂದರೆ, ಇಂದು ನೀವು ನಮ್ಮ ಮಠದ ಅತಿಥಿಗಳು, ನಿಮ್ಮನ್ನು ವಿಚಾರಿಸಿಕೊಳ್ಳಲು ಸ್ವಾಮೀಜಿಯವರು ಹೇಳಿ ಕಳುಹಿಸಿದ್ದಾರೆ ಎಂದ. ಮತ್ತೆ ಬಲವಂತ ಪಡಿಸಿ, ಆತನೇ ನಿಂತು ನಾವು ಹೊಟ್ಟೆ ತುಂಬಾ, ವಿಧವಿಧವಾದ ತಿಂಡಿಗಳನ್ನು ತಿನ್ನುವಂತೆ ನೋಡಿಕೊಂಡು, ನಮ್ಮನ್ನು ಬೀಳ್ಕೊಟ್ಟ. ಅಲ್ಲಿನ ಭಿನ್ನ ರೀತಿಯ ಅತಿಥಿ ಸತ್ಕಾರ ಸೋಜಿಗ ಮೂಡಿಸಿ, ವೃಥಾ ಅನುಮಾನ ಪಟ್ಟಿದ್ದಕ್ಕೆ ನಾಚಿಕೆಯೂ ಆಯಿತು.

ವಿಶ್ವ ಪ್ರಸಿದ್ಧ ಎಲ್ಲೋರಾ ಭೇಟಿ: ಅಲ್ಲಿಂದ ಮುಂದೆ ನಮ್ಮ ಪಯಣ ಔರಂಗಾಬಾದಿನೆಡೆಗೆ ಸುಖಕರವಾಗಿ ಸಾಗಿತು. ವಿಶ್ವಪ್ರಸಿದ್ಧ ಗುಹಾಂತರ್ದೇವಾಲಯಗಳಿರುವ ಎಲ್ಲೋರಾದ ಮೂಲಕವೇ ನಮ್ಮ ಹಾದಿಯಿದ್ದಿದು ನಮ್ಮ ಅದೃಷ್ಟ. ಅದ್ಭುತವಾದ, ಅಗಾಧವಾದ ಕಲಾ ನೈಪುಣ್ಯತೆಯಿಂದ ವಿಶ್ವ ವಿಖ್ಯಾತವಾದ ಎಲ್ಲೋರಾ ಒಂದು ವಿಸ್ಮಯವೇ ಸರಿ. ಪ್ರಕೃತಿ ಸೌಂದರ್ಯದೊಡನೆ ತಮ್ಮ ಪರಿಶ್ರಮ, ಕಲಾ ಜ್ಞಾನವನ್ನು ಬೆರೆಸಿ ಸೃಷ್ಟಿಸಿರುವ ಈ ಮಂದಿರಗಳ ಮಾಲೆಯನ್ನು ವರ್ಣಿಸಲಸಾಧ್ಯ. ಬೌದ್ಧ, ಹಿಂದು ಮತ್ತು ಜೈನ ಮತಗಳ ಸುಮಧುರ ಸಂಗಮವಿದು. ಸಾವಿರದ ಐನೂರು ವರ್ಷಗಳ ಹಿಂದೆ ಆರಂಭವಾಗಿ, ಮುಂದೆ ಮೂರೂ ಮತಗಳ ಪ್ರಮುಖ ಧಾರ್ಮಿಕ ಕೇಂದ್ರವಾಗಿ ರೂಪುಗೊಂಡಿತು ಎಲ್ಲೋರ. ಅವುಗಳನ್ನು ನೋಡುತ್ತಲೇ, ಇದರ ಹಿಂದೆ ನಮ್ಮ ಕನ್ನಡ ನಾಡಿನ ರಾಷ್ಟ್ರಕೂಟ ದೊರೆ ಒಂದನೇ ಕೃಷ್ಣನ ಕೊಡುಗೆಯೂ ಇಲ್ಲಿದೆಯೆಂಬ ಹೆಮ್ಮೆ ಮೂಡಿತು. ಸಮಯದ ಅಭಾವ, ಹಾಗೂ ನಮ್ಮಣ್ಣನಿಗಾಗಿದ್ದ ಅಯಾಸದಿಂದಾಗಿ, ಅಜಂತಾ ಗುಹೆಗಳಿಗೆ ಹೋಗುವ ಬಯಕೆಯನ್ನು ಬಲವಂತವಾಗಿ ತಡೆಹಿಡಿದೆವು.

ಮುಂದೆ ದೌಲತಾಬಾದ್ ಅಥವಾ ದೇವಗಿರಿಯನ್ನು ನೋಡಿದೆವು. ಈ ಸ್ಥಳಕ್ಕೆ ಸುಮಾರು ಎರಡು ಸಾವಿರ ವರ್ಷಗಳಿಗಿಂತಲೂ ಹಿಂದಿನ ಇತಿಹಾಸವಿದ್ದು, ಸುಮಾರು ಸಾವಿರ ವರ್ಷಗಳ ಕೋಟೆಯ ಪಳೆಯುಳಿಕೆಗಳನ್ನು ಈಗಲೂ ಕಾಣಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿ ನನಗೆ ನೆನಪಿಗೆ ಬಂದದ್ದು, ದೆಹಲಿಯಿಂದ ತನ್ನ ಇಡೀ ರಾಜಧಾನಿಯನ್ನು ದೇವಗಿರಿಗೆ ವರ್ಗಾಯಿಸಿದ ಮೊಹಮ್ಮದ್ ಬಿನ್ ತುಘಲಕ್ ನ ಬಗ್ಗೆ ಓದಿದ ಚರಿತ್ರೆ.

ಬಡವನ ತಾಜ್ ಮಹಲ್: ಮಾರನೆಯ ದಿನ ಔರಂಗಾಬಾದ್ ನಲ್ಲಿ ನಮ್ಮವಿಶ್ರಾಂತಿ. ಅಂದು ಸಮೀಪದಲ್ಲೇ ಇದ್ದ ಬೀವಿ-ಕಾ-ಮುಕ್ಬಾರಾ ಎಂಬ ಸ್ಮಾರಕವನ್ನು ನೋಡಲು ಹೋದೆವು. ಸುಮಾರು 1670/80 ರಲ್ಲಿ ನಿರ್ಮಿತವಾಗಿರುವ ಇದು ಆಗ್ರಾದ ತಾಜ್ ಮಹಲ್ ನ ಪ್ರತಿರೂಪ. ದೆಹಲಿಯ ಔರಂಗಜೇಬ್ ಬಾದ್ ಶಾಹನ ಮಗ ಅಜಮ್ ಶಾ ತನ್ನ ತಾಯಿ ರಬಿಯಾ ದುರಾನಿ ಯ ನೆನಪಿನಲ್ಲಿ ನಿರ್ಮಿಸಿರುವ ಇದು ತಾಜ್ ಮಹಲ್ ನ ಪ್ರತಿಬಿಂಬವೇ ಆಗಿದ್ದರೂ, ಅಲ್ಲಿನ ಶ್ರೀಮಂತಿಕೆ ಇಲ್ಲದೆ, 'ಬಡವನ ತಾಜ್ ಮಹಲ್' ಎಂಬ ಕೀರ್ತಿಗೆ ಪಾತ್ರವಾಗಿದೆ. ಗಾತ್ರ, ವಿನ್ಯಾಸ ಎಲ್ಲವೂ ಅಲ್ಲಿಯದೇ, ಆದರೆ ಅಂದಿನ ದಿನಗಳಲ್ಲಿದ್ದ ಹಣಕಾಸಿನ ಅಭಾವದಿಂದಾಗಿ ವೈಭವಯುತವಾಗಲಿಲ್ಲ. ಆದರೂ ಸುತ್ತಲಿನ ವಿಶಾಲವಾದ ಸುಂದರ ಉದ್ಯಾನವನ, ಹಿನ್ನೆಲೆಯಲ್ಲಿ ಕುದುರೆ ಲಾಳದಾಕೃತಿಯಲ್ಲಿರುವ ಬೆಟ್ಟಗಳ ಸಾಲು ಈ ಸ್ಮಾರಕದ ಅಂದವನ್ನು ಹೆಚ್ಚಿಸಿದೆ.

ಹೆಸರಿಗೆ ಉಡುಪಿ ಹೋಟೆಲ್: ಔರಂಗಾಬಾದ್ ನಿಂದ ಮುಂದೆ ನಾವು ಬೀಡ್ ಎಂಬ ಊರಲ್ಲಿ ತಂಗಿದ್ದೆವು. ಅಂದು ದಾರಿಯುದ್ದಕ್ಕೂ ಸರಿಯಾಗಿ ತಿನ್ನಲು ಏನೂ ಸಿಗದೆ ರಾತ್ರಿಯ ವೇಳೆಗೆ ಬಹಳ ಹಸಿವಾಗಿತ್ತು. ಊರು ಪ್ರವೇಶಿಸುತ್ತಿದ್ದಂತೆ ದೊರಕಿದ ಹೋಟೆಲ್ ಒಂದರಲ್ಲಿ ಇದ್ದ, ಜಾಮೂನ್, ಲಾಡು, ಬಾದುಷಾ ಮುಂತಾದ ಸಿಹಿತಿಂದಿಗಳನ್ನು ಕಬಳಿಸಿದೆವು. ನಂತರ ಒಂದು ರೂಮ್ ಸೇರಿಕೊಂಡು ಸಿದ್ಧರಾಗಿ, ಬರುವಾಗ ದಾರಿಯಲ್ಲಿ ಕಂಡಿದ್ದ ಉಡುಪಿ ಹೋಟೆಲ್ ಗೆ ಕಾತರದಿಂದ ಹೋದೆವು. ನಮ್ಮೂರ ಹೋಟೆಲ್ ಸಿಕ್ಕಿದೆ ಎಂಬ ಸಂತೋಷದಲ್ಲಿ ಇಡ್ಲಿ, ದೋಸೆ ಅಂತೆಲ್ಲಾ ತರಿಸಿದೆವು. ಆದರೆ ಇಡ್ಲಿಗೆ ಸುತ್ತಿಗೆ, ದೋಸೆಗೆ ಕತ್ತರಿಗಳನ್ನೂ ಕೊಟ್ಟಿದ್ದರೆ ಸರಿಹೋಗುತ್ತಿತ್ತೇನೋ. ಎಲ್ಲವನ್ನೂ ಹಾಗೇ ಬಿಟ್ಟು ಸಪ್ಪೆ ಮುಖದಿಂದ ಹೊರಬಂದೆವು.

ಮುಂದಿನ ಪುಟ ನೋಡಿ ...

ತುಳಜಾಪುರದ ಭವಾನಿ: ಮರಾಠರ ಆರಾಧ್ಯ ದೇವತೆ, ಮಹಾರಾಷ್ಟ್ರದ ಬಹುತೇಕ ಜನರ ಕುಲದೈವತೆ, ಶಕ್ತಿ ಪೀಠಗಳಲ್ಲಿ ಒಂದೆನಿಸಿಕೊಂಡಿರುವ ಅಂಬಾ ಭವಾನಿಯ ದೇಗುಲವಿರುವ ತುಳಜಾಪುರ ನಮ್ಮ ಮುಂದಿನ ಪ್ರಮುಖ ಭೇಟಿಯ ತಾಣವಾಗಿತ್ತು. ಸುಮಾರಾದ ಬೆಟ್ಟಗುಡ್ಡಗಳ ನಡುವಿನ ಪರಿಸರದಲ್ಲಿತ್ತು ದೇಗುಲ. ಶ್ರೀ ಆದಿ ಶಂಕರಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟಿತೆಂದು ಹೇಳಲಾಗುವ, ಎಂಟು ಕೈಗಳ, ಮಹಿಷಾಸುರ ಮರ್ಧಿನಿಯ ಅವತಾರದಲ್ಲಿರುವ ಈ ದೇವತೆಯೇ ಛತ್ರಪತಿ ಶಿವಾಜಿಗೆ ಖಡ್ಗ ನೀಡಿದ್ದೆಂದು ಹೇಳಲಾಗುತ್ತದೆ. ದೇವಿಯ ದರ್ಶನ ಮಾಡಿಕೊಂಡು, ಪ್ರಸಾದವಾಗಿ ಅಲ್ಲಿ ನೀಡುವ ದೂಧಪೇಡಗಳನ್ನು ಸ್ವೀಕರಿಸಿ ಹೊರಬಂದೆವು. ಅಂದು ನಮಗೆ ಮಧ್ಯಾನ್ಹ ಹಾಗು ರಾತ್ರಿ, ಎರಡು ಹೊತ್ತೂ ಒಳ್ಳೆಯ ಊಟ ದೊರಕಿತ್ತು.

ಇದೇ ಮಹಾ ಸುದಿನ: ೨/೨/೧೯೮೯ ಗುರುವಾರ, ತುಳಜಾಪುರದಿಂದ ಹೊರಟಾಗಲೇ ಇಂದು ನಮ್ಮ ನಾಡಿಗೆ ಪುನಃ ಹೆಜ್ಜೆ ಇಡುತ್ತೇವೆಂಬ ಸಂತಸ ಮನದಲ್ಲಿ. ಅದಕ್ಕೆ ಪೂರಕವಾಗಿ ಆಗಲೇ ಅಲ್ಲಲ್ಲಿ ಕನ್ನಡ ಪದಗಳು ಕೇಳಲಾರಂಭವಾಗಿತ್ತು ಮುಂದೆ ಸೊಲ್ಲಾಪುರದಲ್ಲಂತೂ ಇನ್ನೇನು ನಮ್ಮ ಊರು ಬಂದೇ ಬಿಟ್ಟಿತೇನೋ ಎಂಬ ಭಾವನೆ. ನಾವು ಬೆಂಗಳೂರಿನಿಂದ ಬಂದವರು ಎಂದು ತಿಳಿಯುತ್ತಿದ್ದಂತೆ ಜನರು ಕನ್ನಡದಲ್ಲೇ ಮಾತನಾಡಿಸುತ್ತಿದ್ದರು. ಅನೇಕ ಜನ ಕಾಫಿ, ಟೀ, ತಿಂಡಿಗೆ ಆಹ್ವಾನಿಸಿ ಸತ್ಕರಿಸಿದರು. ಸೊಲ್ಲಾಪುರದಿಂದ ಮುಂದೆ ಎಂದಿಗಿಂತಲೂ ಹೆಚ್ಚು ಬಿಸಿಲು, ಬರಡು ನೆಲ ಮರಳುಗಾಡಿನಲ್ಲಿ ಪಯಣಿಸಿದಂತಹ ಅನುಭವ. ಆದರೆ ಕರ್ನಾಟಕವನ್ನು ಇನ್ನೇನು ಪ್ರವೇಶಿಸುತ್ತೀವೆಂಬ ಕಾತರವೇ ಎಲ್ಲವನ್ನೂ ತಣಿಸಿ ನಮ್ಮನ್ನು ಮುಂದೆ ಸೆಳೆದೊಯ್ಯುತ್ತಿತ್ತು.

ಸಮಯ ಮಧ್ಯಾನ್ಹ ೧೨.೩೮ ತಂಪಾದ ಮರಗಳ ಸಾಲು ಕಾಣಿಸಿತು, ಆ ಮರಗಳ ನಡುವಿನಲ್ಲಿ ನಿಶ್ಯಬ್ಧವಾಗಿ ಹರಿಯುತ್ತಿರುವ ಭೀಮಾ ನದಿ, ಅದುವೇ ಕರ್ನಾಟಕ, ಮಹಾರಾಷ್ಟ್ರಗಳ ನಡುವಿನ ಗಡಿರೇಖೆ. ಅದಕ್ಕಿದ್ದ ಪುಟ್ಟದೊಂದು ಸೇತುವೆಯನ್ನು ದಾಟುತ್ತಿದ್ದಂತೆ, ಸ್ವರ್ಗವನ್ನೇ ಪ್ರವೇಶಿಸಿದಷ್ಟು ಸಂತೋಷ, ನಮ್ಮ ಇಡೀ ಪ್ರಯಾಣದಲ್ಲಿಯೇ ಅತ್ಯಂತ ಸಂತೋಷದ ಕ್ಷಣವದು. ನಮ್ಮನ್ನೆದುರ್ಗೊಳ್ಳಲು ಕಾಯುತ್ತಿದ್ದವರು ರಸ್ತೆಯ ಬದಿಯಲ್ಲಿಯೇ ನಿಂತಿದ್ದ ನಮ್ಮ ಆರಾಧ್ಯ ದೈವ ಆಂಜನೇಯನ ಮೂರ್ತಿ, ಪುಟ್ಟದೊಂದು ಕಲ್ಲು ಮಂಟಪದಲ್ಲಿ. ಮಾರುತಿ ರಾಯನಿಗೆ ಕೈಗಳ ಮುಗಿಯುತ್ತಾ ಕರ್ನಾಟಕದೊಳಗೆ ನಲವತ್ತು ದಿನಗಳ ನಂತರ ಮತ್ತೆ ಪ್ರವೇಶ ಮಾಡಿದೆವು. ಆ ಸಂತೋಷವನ್ನು ಆಚರಿಸಿಕೊಳ್ಳಲೇನೋ ಎಂಬಂತೆ ಆರಂಭದಲ್ಲಿಯೇ ರಸ್ತೆ ಬದಿಯಲ್ಲಿಯೇ ಇದ್ದ ಒಂದು ಆಲೆಮನೆಗೆ ನುಗ್ಗಿದೆ. ಅಲ್ಲಿನವರು ಯಥೇಚ್ಚವಾಗಿ ಕಬ್ಬಿನ ಹಾಲು, ಬಿಸಿ ಬೆಲ್ಲ ಎಲ್ಲ ಕೊಟ್ಟು ಉಪಚರಿಸಿದರು. ಮುಂದೆ ಹೊರಟು ಹೋಗಿದ್ದ ನಮ್ಮಣ್ಣ ನನ್ನನ್ನು ಹುಡುಕಿಕೊಂಡು ಬಂದು, ನನ್ನನ್ನು ಬೈಯ್ಯುತ್ತಲೇ ಅವರ ಆತಿಥ್ಯ ಸ್ವೀಕರಿಸಿದ.

ಗೋಲ್ ಗುಂಬಜ್ ನ ಹಿರಿಮೆ: ನಮ್ಮ ಅಂದಿನ ಗುರಿ ಬಿಜಾಪುರ. ರಸ್ತೆ ಬದಿಯಲ್ಲಿದ್ದ ಮೈಲಿಕಲ್ಲು ೩೦ ಕಿ ಮೀ ತೋರಿಸುತ್ತಿತ್ತು. ಬಟ್ಟಬಯಲಿನ ಪ್ರದೇಶದಲ್ಲಿ ಒಂದೇ ಒಂದು ಅರ್ಧ ಗೋಳಾಕೃತಿಯ ದಿಬ್ಬ ಕಾಣುತ್ತಿತ್ತು. ಅದು ಬಿಟ್ಟರೆ ಸಂಪೂರ್ಣ ಮಟ್ಟವಾದ ನೆಲ. ಮುಂದೆ ಮುಂದೆ ಹೋದಂತೆ ನಮಗೆ ಆಶ್ಚರ್ಯವಾಗತೊಡಗಿತು. ಏಕೆಂದರೆ ಅಂತಹ ಸ್ಪಷ್ಟವಾದ ಗೋಳಾಕೃತಿಯ ದಿಬ್ಬ ಹೇಗೆ ಇರಲು ಸಾಧ್ಯ ಎಂದು.ಇನ್ನೂ ಹತ್ತಿರ ಹೋದಂತೆ ನಮಗನ್ನಿಸಿತು ಅದು ಗೋಲ್ ಗುಂಬಜ್ ಇರಬಹುದು ಎಂದು.

ಮುಂದಿನ ಸಂಚಿಕೆಯಲ್ಲಿ: ನಮ್ಮನೆಯ ಬೀದಿಗೆ ತಿರುಗುತ್ತಿದ್ದಂತೆ ಉದ್ವೇಗದಲ್ಲಿ ಎದೆ ಧವ ಧವ ಎನ್ನುತ್ತಿತ್ತು, ಆನಂದದ ಉದ್ವೇಗದಲ್ಲಿ ಸೈಕಲ್ ತುಳಿಯಲೂ ಆಗದಂತಹ ಪರಿಸ್ಥಿತಿ....

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ

ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್

ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು

ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ

ಇವರ "ಮಂದಹಾಸ"

ಜಾಣ ಕರ್ನಾಟಕ – ಉತ್ತರ

೧. ವಿನಾಯಕ ಕೃಷ್ಣ ಗೋಕಾಕ್, ಭಾರತ ಸಿಂಧು ರಶ್ಮಿ

೨ ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿ(ಸುಮಾರು 1889). ಗುಲ್ವಾಡಿ ವೆಂಕಟರಾಯರು

ವಿಜ್ಞಾನ

ಬ್ರೆಡ್, ದೋಸೆ, ಇಡ್ಲಿಗಳಲ್ಲಿ ತೂತೇಕೆ ?

ಸಂಕಲನ: ಬದರಿ ತ್ಯಾಮಗೊಂಡ್ಲು

ಬೇಕಾಗುವ ಸಾಮಾನು:

ಈಸ್ಟ್ - 2 ಚಮಚ
ಪ್ಲಾಸ್ಟಿಕ್ ಬಾಟಲ್ - 1
ಸಕ್ಕರೆ - 1 ಚಮಚ
ಸ್ವಲ್ಪ ಬೆಚ್ಚಗಿನ ನೀರು
ಬಲೂನ್ - 1

ವಿಧಾನ:

ಬಾಟಲ್ ಗೆ ಬೆಚ್ಚಗಿನ ನೀರು ಹಾಕಿ ನಂತರ ಈಸ್ಟ್ ಮತ್ತು ಸಕ್ಕರೆ ಹಾಕಿ ಬಲೂನಿನ ಮೂತಿಯನ್ನು ಬಾಟಲಿನ ಬಾಯಿಗೆ ಬಿಗಿಯಾಗಿ ಇಡಿ. ಬಲೂನ್ ಬಾಟಲಿನ ಬಾಯಿಗೆ ಗಟ್ಟಿಯಾಗಿ ಕೂತುಕೊಳ್ಳಬೇಕು. ಹಾಗಿಲ್ಲದಿದ್ದರೆ, ದಾರದಿಂದ ಬಿಗಿಯಿರಿ. ಒಂದಷ್ಟು ಘಂಟೆ ಹಾಗೆ ಬಿಡಿ. ಬಲೂನ್ ಉದಿಕೊಳ್ಳಲು ಶುರುವಾಗುತ್ತದೆ.

ಏನಾಗುತ್ತಿದೆ:

ಈಸ್ಟ್ ಒಂದು ಸೂಕ್ಷ್ಮಾಣು ಜೀವಿ. ಅದು ಬೆಚ್ಚಗಿನ ವಾತಾವರಣದಲ್ಲಿ ಮಾತ್ರ ವೃದ್ಧಿಸುತ್ತದೆ. ಸಕ್ಕರೆ ಹಾಕಿರುವುದರಿಂದ ಅದನ್ನು ತಿಂದು ಅದು ಬೆಳೆಯಲು ಅನುಕೂಲವಾಗುತ್ತದೆ. ಹಾಗೆ ಸಕ್ಕರೆಯನ್ನು ತಿಂದು ಅದು ಕಾರ್ಬನ್ ಡೈ ಆಕ್ಸೈಡ್ ಅನಿಲವನ್ನು ಬಿಡುಗಡೆ ಮಾಡುತ್ತದೆ. ಅದೇ ಬಲೂನ್ ಉದಲು ಕಾರಣ. (ದೋಸೆ ಹಿಟ್ಟು ಥಂಡಿ ಇದ್ದರೆ ಸರಿಯಾಗಿ ಹುದುಗು ಬರದಿರಲು ಈ ಸೂಕ್ಷ್ಮಾಣು ವೃದ್ಧಿಸದಿರುವುದೇ ಕಾರಣ)

ಇದೇ ರೀತಿ, ಹುದುಗು ಬರುವ ತಿಂಡಿಗಳಲ್ಲಿ (ಬ್ರೆಡ್, ದೋಸೆ, ಇಡ್ಲಿ ಇತ್ಯಾದಿ), ಈಸ್ಟ್ ಎಂಬ ಈ ಜೀವಾಣು ಅನಿಲವನ್ನು ಬಿಡುಗಡೆ ಮಾಡಿ ಹಿಟ್ಟು ಉಬ್ಬುವಂತೆ ಮಾಡಿರುತ್ತದೆ. ಆದರೆ ಎಲ್ಲ ಗಾಳಿಯೂ ಹೊರ ಹೋಗಲು ಆಗಿರುವುದಿಲ್ಲ. ಆ ಹಿಟ್ಟನ್ನು ಓವೆನ್ ನಲ್ಲಿ ಅಥವಾ ಕುಕ್ಕರ್, ಕಾವಲಿ ಮೇಲೆ ಬೇಯಿಸಿದಾಗ, ಶಾಖದ ಪ್ರಭಾವದಿಂದ ಅನಿಲವು ಆಚೆ ಹೋಗಿ ಆ ಜಾಗವು ಬರಿದಾಗಿ, ರಂದ್ರಗಳಿಂದ ಇರುವು ಪದಾರ್ಥವಾಗುತ್ತದೆ. ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸಿಡ್ನಿ ಕನ್ನಡ ಶಾಲೆಯ ಆಶ್ರಯದಲ್ಲಿ "ಯುಗಾದಿ ಹಬ್ಬ ಸಾಂಸ್ಕೃತಿಕ ಸಂಜೆ"

ಮಕ್ಕಳು ಹಾಗೂ ಹಿರಿಯರಿಂದ ಮನರಂಜನೆ ಕಾರ್ಯಕ್ರಮ

ದಿನಾಂಕ 17-05-2014, 5:30 PM

WattleGrove Public school, Cressbrook drive, Wattlegrove - NSW 2171

Booking is must. Simply text your name & number of seats to any one of:
ಕನಕಾಪುರ ನಾರಾಯಣ - 0423634979, ನಾಗೇಂದ್ರ ಅನಂತಮೂರ್ತಿ - 0401193852
ನಾಗರಾಜ್ -0400836415, ಶ್ರೀಧರ್ - 0422549695

Vedanta Ten-Minute Play Festival in Sydney

Date : 6 June 2014, 7:30 pm, 7 June 2014, 7:30 pm, 8 June 2014, 1:00 p.m

Address : King Street Theatre, 644 King Street. Newtown, Sydney

Contact number : 0408 029 336
Website : www.saradavedanta.org

Ticket Price : $25 (Concession $15)

Blacktown City Festival 2014

The annual Blacktown City Festival is back

Saturday 24 to 31 May 2014!

http://www.weekendnotes.com/blacktown-city-festival/

ನಮ್ಮ
ಸುತ್ತಾ
ಮುತ್ತಾ

VIVID SYDNEY LIGHT FESTIVAL

23rd May – 09th June 2014
6:00 PMOnwards

Fantastic display of lights around Circular Quay. Don't miss out the Lighting of the Sails – Projections on Opera House

Details: http://www.vividsydney.com/

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.